ಭಾಗಗಳಲ್ಲಿ ಕೊಳವೆ ಬಾವಿಗಳನ್ನು ಮಾಡಲಾಗುತ್ತಿದೆ. ಅಮ್ಮೇನಹಳ್ಳಿ ಕೆರೆಯಲ್ಲಿ ಹೂಳನ್ನು ಎತ್ತಿ ಪಂಪ್ ಅಳವಡಿಸುವ ಬಗ್ಗೆ ಕೋಲಾರದ ಶಾಸಕರು ಕೋರಿಕೆಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಒಂದು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತ ಒಳಚರಂಡಿ ಮಂಡಲಿಯಿಂದ ಪಡೆಯಲಾಗಿದೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳು ಇತ್ತೀಚಿಗೆ ಕೋಲಾರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಕೊಟ್ಟಿದ್ದ ಭರವಸೆಯನ್ನು ಪರಿಗಣಿಸಿ ಈ ಕೆಲಸಕ್ಕೆ ನಗರಾಭಿವೃದ್ಧಿ ಇಲಾಖೆ ವತಿಯಿಂದ ವಿಶೇಷವಾಗಿ ಇಪ್ಪತ್ತೈದು ಲಕ್ಷ ರೂ.ಗಳ ಹಣವನ್ನು ಕೋಲಾರ ನಗರ ಸಭೆಗೆ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ.

ಅಧ್ಯಕ್ಷರು : ಇವತ್ತು ಎರಡು ಶೂನ್ಯ ವೇಳೆಯ ಪ್ರಸ್ತಾಪಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ 40-50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಇವತ್ತು 25 ಲಕ್ಷ ಕೊಟ್ಟರೆ ಹೇಗೆ?

ಅಧ್ಯಕ್ಷರು : ತಾವು ಅವರ ಕಛೇರಿಗೆ ಹೋಗಿ ಚರ್ಚೆ ಮಾಡಿ,

ಶ್ರೀ ಸಿ. ಭೈರೇಗೌಡ : ಈ ಸದನದಲ್ಲಿ ಕೊಟ್ಟಿರತಕ್ಕಂಥ ಭರವಸೆ, ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಹೇಳಿದ್ದಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಭೈರೇಗೌಡರು ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದರೂ ಸಹ ಕೋಲಾರ ನಗರದ ಕೆರೆಯಲ್ಲಿ ಹೂಳು ಎತ್ತಲು ಹಣ ಬಿಡುಗಡೆ ಮಾಡಲಿಲ್ಲ. ಆದರೆ ನಾವು ವಿಶೇಷ ಕಾಳಜಿಯನ್ನು ವಹಿಸಿ ಇಪ್ಪತ್ತೈದು ಲಕ್ಷ ಕೊಟ್ಟರೆ ಅದನ್ನು ನೀವು ಸ್ವಾಗತಿಸಬೇಕು. ಕುಡಿಯುವ ನೀರಿನ ತೀವ್ರತೆಯನ್ನು ಪರಿಗಣಿಸಿ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಅನುದಾನ ಬಿಡುಗಡೆ ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ಯಾವ ಕೆರೆಗಳಿಗೂ ಹೂಳು ಎತ್ತಲು ಹಣ ಕೊಟ್ಟಿಲ್ಲ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಏನು ಭರವಸೆಯನ್ನು ಕೊಟ್ಟಿದ್ದಾರೆ ಅದನ್ನು ಈಡೇರಿಸಿ ಎಂದು ನಾವು ಕೇಳುತ್ತಿದ್ದೇವೆ. ವಿಶೇಷವಾಗಿ ಏನೂ ಕೇಳುತ್ತಿಲ್ಲ.

ಆಲಮಟ್ಟಿ ಜಲಾಶಯದಲ್ಲಿ515 ಅಡಿಗಳಿಗೆ ನೀರನ್ನು ನಿಲ್ಲಿಸಿರುವುದರಿಂದ ಬಾಗಲಕೋಟೆ ಪಟ್ಟಣದ ನಿವಾಸಿಗಳಿಗೆ ಆಗಿರುವ ತೊಂದರೆ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : (ಕನಕಪುರ) ಮಾನ್ಯ ಅಧ್ಯಕ್ಷರೇ ಬಾಗಲಕೋಟೆಯಲ್ಲಿ ಆಲಮಟ್ಟಿ ಜಲಾಶಯದಲ್ಲಿ 515 ಅಡಿಗಳಿಗೆ ನೀರನ್ನು ನಿಲ್ಲಿಸಿರುವುದರಿಂದ ಸುಮಾರು 450 ಮನೆಗಳು ನಿರಾಶ್ರಿತವಾಗಿವೆ. ನಾನು, ಭೈರೇಗೌಡರು, ಶ್ರೀ ಸೋಮಶೇಖರ್‌ರವರು ಮತ್ತು ಅಲ್ಲಿರತಕ್ಕಂಥ ಶಾಸಕರು ಮತ್ತು ಮಾನ್ಯ ಜಗದೀಶ್ ಶೆಟ್ಟರ್ ಅವರು ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ಮಾಡಿದ್ದೇವೆ. ಅಲ್ಲಿರತಕ್ಕಂಥ ನಿರಾಶ್ರಿತರು ಬಹಳ ತೊಂದರೆಯಲ್ಲಿದ್ದಾರೆ. ಸರ್ಕಾರದವರು ಕೆಲವು ಕ್ರಮಗಳನ್ನು ಮಾಡಿದ್ದಾರೆ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ಇನ್ನೂ ಕೆಲವು ಕೆಲಸಗಳನ್ನು ಮಾಡತಕ್ಕಂಥಾದ್ದು ಇದೆ. ಮಾನ್ಯ

ಶಾಸಕರು ಸ್ಥಳೀಯರು. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಸಹಿ ಮಾಡಿದ್ದೇನೆ. ತಾವು ದಯವಿಟ್ಟು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಮಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ಮಾನ್ಯ ನೀರಾವರಿ ಸಚಿವರು ಸದನದಲ್ಲಿ ಇದ್ದಾರೆ. ಅವರು ಸಹ ಸ್ಥಳಕ್ಕೆ ಹೋಗಿ ನೋಡಿದ್ದಾರೆ. ಅಲ್ಲಿರುವ ಪರಿಸ್ಥಿತಿಯ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು ಮತ್ತು ಚರ್ಚೆಗೆ ತಾವು ಅವಕಾಶ ಕೊಡಬೇಕು. ಏಕೆಂದರೆ ನಿರಾಶ್ರಿತ ಜನ ಸರ್ಕಾರದ ಕಡೆ ನೋಡುತ್ತಿದ್ದಾರೆ. ಅಧಿವೇಶನ ನಡೆಯುತ್ತಿದೆ ನಮಗೆ ಏನಾದರೂ ಒಂದು ಪರಿಹಾರ ಸಿಗಬಹುದು ಅಂತ ಕಾಯುತ್ತಿದ್ದಾರೆ. ಮಾನ್ಯ ನೀರಾವರಿ ಮಂತ್ರಿಗಳು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

+ಶ್ರೀ ಎಸ್.ಎಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಅಧ್ಯಕ್ಷರೇ, ಬಚಾವತ್ ಆಯೋಗದ ತೀರ್ಪಿನಂತೆ ಕೃಷ್ಣಾ ಮೇಲ್ದಂಡೆ ಯೋಜನೆಯ ಎಲ್ಲಾ ಕೆಲಸಕಾರ್ಯಗಳು ಮುಗಿದು ಹೋಗಿವೆ. ನಾವು ಪ್ರಸಕ್ತ ವರ್ಷದಲ್ಲಿ 515 ಅಡಿಗಳಷ್ಟು ನೀರನ್ನು ಆಲಮಟ್ಟಿ ಜಲಾಶಯದಲ್ಲಿ ಹಿಡಿದಿಟ್ಟಿದ್ದೇವೆ. ಮುಂದಿನ ವರ್ಷ 519.6 ಅಡಿಗಳಷ್ಟು ನೀರನ್ನು ನಾವು ಹಿಡಿದಿಟ್ಟು ಲಕ್ಷಾಂತರ ಎಕರೆಗಳಷ್ಟು ನೀರಾವರಿ ಆಗುವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಸದ್ಯದಲ್ಲಿಯೇ ಪ್ರಧಾನ ಮಂತ್ರಿಗಳನ್ನು ಕರೆಸಿ ಆಲಮಟ್ಟಿ ಜಲಾಶಯವನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡುತ್ತೇವೆ ಎನ್ನುವ ಘೋಷಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿರುವುದನ್ನು ನಾವೆಲ್ಲ ಓದಿದ್ದೇವೆ. ಈ ಸದನ ನಡೆಯುತ್ತಿರುವ ಸಂದರ್ಭದಲ್ಲಿ ನಾನು ಇದನ್ನೂ ಪ್ರಸ್ತಾಪ ಮಾಡುವುದು ಅನಿವಾರ್ಯ. ಆಲಮಟ್ಟಿ ಜಲಾಶಯದಲ್ಲಿ 515 ಅಡಿಗಳಷ್ಟು ನೀರನ್ನು ನಿಲ್ಲಿಸಿರುವುದರಿಂದ ಬಾಗಲಕೋಟೆ ಪಟ್ಟಣದಲ್ಲಿ ಸಾವಿರಾರು ಮನೆಗಳಲ್ಲಿ ನೀರು ನಿಂತು ಆ ಕುಟುಂಬಗಳು ನಿರಾಶ್ರಿತರಾಗಿದ್ದಾರೆ. ಅದರಲ್ಲಿ ಎಲ್ಲರಿಗೂ ಇತ್ತೀಚೆಗೆ ನಿವೇಶನಗಳು ಸಿಗುವುಂತಹ ವ್ಯವಸ್ಥೆ ಆಗಿದೆ. ಅನೇಕ ಜನರಿಗೆ ಇನ್ನೂ ಪರಿಹಾರ ಧನ ವಿತರಣೆಯಾಗಲಿಲ್ಲ. ಮನೆ ಕಟ್ಟಿಕೊಳ್ಳುವುದಕ್ಕೆ ಸಾವಿರಾರು ಜನರಿಗೆ ಅನುಕೂಲ ಇಲ್ಲದೆ ಇರುವುದರಿಂದ ಅವರಿಗೆ ಹೆಚ್ಚಿನ ರೀತಿಯಲ್ಲಿ ಧನಸಹಾಯ ಮಾಡಬೇಕೆನ್ನುವ ಕಾರಣವನ್ನು ಸಹ ಮುಂದಿಡಲಾಗಿದೆ. ಮಾನ್ಯ ಹೆಚ್.ಕೆ. ಪಾಟೀಲರು ಒಬ್ಬರು ಬಿಟ್ಟರೆ ಇನ್ನಿತರೆ ಯಾವುದೇ ಮಂತ್ರಿಗಳು ಆ ಭಾಗಕ್ಕೆ ಬಂದು ಭೇಟಿ ನೀಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಕ್ಕಪಕ್ಕದ ಜಿಲ್ಲೆಗಳಿಗೆ ಭೇಟಿ ನೀಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಬಂದಿದ್ದರು ಸಹ ಬಾಗಲಕೋಟೆಯ ನಿರಾಶ್ರಿತರ ನೋವು ನಲಿವುಗಳನ್ನು ತಿಳಿದುಕೊಳ್ಳುವುದಕ್ಕೆ ಬರಲಿಲ್ಲ ಎನ್ನುವ ವಿಷಾದದ ಛಾಯೇ ನಮ್ಮ ಬಾಗಲಕೋಟೆಯ ಜನರಲ್ಲಿ ಆವರಿಸಿದೆ. ಆಲಮಟ್ಟಿ ಜಲಾಶಯದಲ್ಲಿ ಈಗಾಗಲೇ 515 ಅಡಿಗಳಷ್ಟು ಜಲಾಶಯದಲ್ಲಿ ನೀರನ್ನು ನಿಲ್ಲಿಸಿರುವುದರಿಂದ ಅನೇಕ ಜನರನ್ನು ನಿರಾಶ್ರಿತರನ್ನಾಗಿ ಮಾಡಿದೆ. ಅವರು ತಮ್ಮ ಮನೆಗಳನ್ನು ಕಳೆದಕೊಂಡು ಆಕಾಶವನ್ನು ನೋಡುವಂತಹ ಒಂದು ದುಸ್ಥಿತಿ ಬಂದಿದೆ. ಈ ಸರ್ಕಾರ ಬಂದ ಮೇಲೆ ಆ ಸಂತ್ರಸ್ಥರಿಗೆ ವಿಶೇಷವಾದ ಯಾವ ಪ್ರಕಟಣೆಯನ್ನು ಮಾಡಲಿಲ್ಲ.

1.40 ಪಿ.ಎಂ.

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು ಪ್ರಾರಂಭವಾಗಿ ಹದಿನೇಳು ವರ್ಷಗಳಾಗಿದ್ದರೂ ಕೂಡ ಸರಕಾರಗಳು ಬದಲಾದಂತೆ ಅಧಿಕಾರಿಗಳೂ ಬದಲಾಗಿ ಬರುತ್ತಾ ಇದ್ದಾರೆ. ಹೊಸ ಹೊಸ

ಅಧ್ಯಕ್ಷರುಗಳು ಬರುತ್ತಿರುತ್ತಾರೆ. ಈ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನು ನೇಮಿಸುವುದಕ್ಕೆ ಕಳೆದ ಒಂದು ವರ್ಷದಿಂದ ಕೂಡ ಸರಕಾರದವರು ಯಾವ ರೀತಿಯಾದ ಕ್ರಮವನ್ನು ಇದುವರೆವಿಗೂ ತೆಗೆದುಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಕೂಡ ನಮ್ಮ ಕಡೆಗೆ ಬರಲಿಲ್ಲ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರನ್ನು ಅಲ್ಲಿಯ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಕಂದಾಯ ಸಚಿವಾಲಯ ಘೋಷಣೆ ಮಾಡಿದ ಆ ಸಮಿತಿಯು ಇದುವರೆವಿಗೂ ಒಂದೇ ಒಂದು ಸಭೆಯನ್ನು ಕೂಡ ಕರೆದಿಲ್ಲ ಎಂಬ ಮಾತನ್ನು ದೌರ್ಭಾಗ್ಯದಿಂದ ನಾನು ಹೇಳುತ್ತಿದ್ದೇನೆ. ಪ್ರತಿ ಹದಿನೈದು ದಿನಗಳೊಳಗಾಗಿ ಒಮ್ಮೆ ಸಮಿತಿ ಸಭೆ ಸೇರಿ ಅಲ್ಲಿಯ ಜನರ ಸಮಸ್ಯೆಗಳನ್ನು ಕೇಳಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಮಾನ್ಯ ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಪುನರ್‌ವಸತಿ ಸಮಿತಿಯು ಇದುವರೆಗೂ ಒಂದೇ ಒಂದು ಸಭೆಯನ್ನು ಕರೆದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಒಮ್ಮೆ ಸಭೆ ಮಾಡಿ ಸೂಕ್ತ ಚರ್ಚೆಯನ್ನು ಮಾಡಿರುವುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲದೆ ಇರಬಹುದೇನೋ? ಮಾನ್ಯ ಸದಸ್ಯರಿಗೆ ಅನಾನುಕೂಲತೆಯಿಂದಾಗಿ ಆ ಸಭೆಗೆ ಬಂದಿಲ್ಲದೇ ಇರಬಹುದು.

ಶ್ರೀ ಪಿ.ಹೆಚ್. ಪೂಜಾರ್ : ಪ್ರಾಧಿಕಾರ ಸಮಿತಿಯ ಕುರಿತಾದ ಘೋಷಣೆಯಲ್ಲಿ ಹದಿನೈದು ದಿನಗಳಿಗೊಮ್ಮೆ ಸಮಿತಿ ಸಭೆ ಸೇರಬೇಕೆಂದು ಸೂಚನೆಯು ಇದೆ. ಆರು ತಿಂಗಳುಗಳ ಅವಧಿಯಲ್ಲಿ ಕೇವಲ ಒಂದು ಸಭೆಯನ್ನು ಮಾತ್ರ ಆಲಮಟ್ಟಿಯಲ್ಲಿ ಕರೆದಿದ್ದರು. ಬಾಗಲಕೋಟೆಯಲ್ಲಿ ಒಮ್ಮೆ ಕರೆದಂಥ ಸಭೆಯನ್ನು ರದ್ದು ಮಾಡಿದ್ದಾರೆ. ಹೀಗಾಗಿ ಜಿಲ್ಲಾ ಉಸ್ತುವಾರಿ ಸಚಿವರು ಒಂದೇ ಒಂದು ಸಭೆಯನ್ನು ಕೂಡ ಕರೆದಿಲ್ಲ. ಪರಿಸ್ಥಿತಿಯು ಹೀಗೆ ಮುಂದುವರಿಯುವುದಾದರೆ ಸಮಿತಿಯನ್ನು ಘೋಷಣೆ ಮಾಡುವ ಅಗತ್ಯವಾದರೂ ಏನಿತ್ತು? ಈಗ ಅದನ್ನು ರದ್ದುಪಡಿಸಿರುವರೆ? ಎಂಬ ಮಾತನ್ನು ಕೇಳಬಯಸುತ್ತೇನೆ. ಈ ಹಿನ್ನಲೆಯಲ್ಲಿ ನಾನು ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್‌ರವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಅವರ ಸಚಿವ ಸಂಪುಟದ ಎಲ್ಲಾ ಮಾನ್ಯ ಸದಸ್ಯರುಗಳು ಕಂದಾಯ ಸಚಿವರು ಸೇರಿದಂತೆ ಭಾರಿ ಮತ್ತು ಮಧ್ಯಮ ವರ್ಗದ ಕೈಗಾರಿಕಾ ಸಚಿವರು ಮತ್ತಿತರರು ನಮ್ಮಲ್ಲಿಗೆ ಬರಬೇಕು. ಮಾನ್ಯ ಮುಖ್ಯಮಂತ್ರಿಯವರು ಅಲ್ಲಿಗೆ ಸಂದರ್ಶನ ನೀಡಬೇಕು. ತಾವುಗಳೆಲ್ಲರೂ ಅಲ್ಲಿಯ ಜನರ ಕಷ್ಟಸುಖಗಳನ್ನು ವಿಚಾರಿಸಿಕೊಳ್ಳಬೇಕು. ಅವರ ಸಮಸ್ಯೆಗಳನ್ನು ಕೇಳಿ ತಿಳಿದುಕೊಂಡು ಅವುಗಳಿಗೆ ಸೂಕ್ತ ಪರಿಹಾರವನ್ನು ಕೊಟ್ಟು ಅವರ ಬದುಕಿಗೊಂದು ದಾರಿ ಮಾಡಿಕೊಡಬೇಕು. ಈ ಕೆಲಸವನ್ನು ಮಾಡುವುದರ ಮೂಲಕ ಮಾನವೀಯ ಗುಣವನ್ನು ಆ ಬಡ ಜನರ ಕುರಿತಾಗಿ ತೋರಿಸಬೇಕೆಂದು ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ಕೇವಲ 450 ಅನಧಿಕೃತ ಕಟ್ಟಡಗಳನ್ನು ಮಾತ್ರ ಅಲ್ಲಿಗೆ ಸ್ಥಳಾಂತರ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅಲ್ಲಿ ಅನೇಕ ಸಣ್ಣ ಸಣ್ಣ ಗುಡಿಸಲುಗಳಲ್ಲಿ ಬಾಡಿಗೆದಾರರು ಕೂಡ ಇದ್ದಾರೆ. ಅವರಿಗೆ ನಿವೇಶನಗಳನ್ನು ಕೊಟ್ಟಿದ್ದಾರೆ. ಆದರೆ ಮನೆಕಟ್ಟಿಸಿಕೊಳ್ಳಲು ಹಣವನ್ನು ಕೂಡ ಕೊಡಬೇಕು. ಅವರುಗಳಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕಟ್ಟಡಕ್ಕಾಗಿ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಅದರ ಜೊತೆಗೆ ಸಣ್ಣ ಸಣ್ಣ ಉದ್ದಿಮೆಗಳನ್ನು ಆ ಪ್ರದೇಶದಲ್ಲಿ ಸ್ಥಾಪನೆ ಮಾಡಿ ಅಲ್ಲಿಯ ಬಡಜನರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡಬೇಕಾದುದು ಸರಕಾರದ ಕರ್ತವ್ಯವಾಗಿದೆ. ಇದರಿಂದ ನಿರ್ಗತಿಕರಾದ ಬಡಕುಟುಂಬಗಳು ಜೀವನ ನಿರ್ವಹಣೆ ಮಾಡಲು

ಅನುಕೂಲವಾಗುತ್ತದೆ. ಇವೊತ್ತು ಆಣೆಕಟ್ಟೆಯಲ್ಲಿ 516 ರವರೆಗೆ ನೀರು ನಿಲ್ಲಿಸಿದಂಥ ಸಂದರ್ಭದಲ್ಲಿ ಅಲ್ಲಿ ಮಲೇರಿಯ ಮತ್ತು ಇನ್ನಿತರ ಖಾಯಿಲೆ ಮುಂತಾಗಿ ಅನೇಕ ದುಷ್ಪರಿಣಾಮಗಳು ಉಂಟಾಗಿವೆ. ನದಿ ಸಮೀಪದಲ್ಲಿರುವು ಅನೇಕ ಕುಟುಂಬಗಳು ಅನೇಕ ಖಾಯಿಲೆಯಿಂದ ನರಳುತ್ತಿದ್ದು ಅವರಿಗೆ ಯಾವುದೇ ಔಷಧೋಪಚಾರಗಳು ಇಲ್ಲ. ಈ ಕುರಿತು ಸಕಾಲಿಕ ಕ್ರಮಗಳನ್ನು ಸರ್ಕಾರದವರು ಅಲ್ಲಿ ತೆಗೆದುಕೊಳ್ಳಬೇಕು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರಾದಿಯಾಗಿ ಎಲ್ಲಾ ಸಂಪುಟದ ಮಂತ್ರಿಗಳು ಬಂದು ಅಲ್ಲಿಯ ಜನರ ಬವಣೆಗಳನ್ನು ನೋಡಿ ಸೂಕ್ತ ಪರಿಹಾರ ನೀಡುವಲ್ಲಿ ಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ರಾಜ್ಯದ ಜನರಿಗೆ ಅನುಕೂಲ ಮಾಡಿಕೊಟ್ಟು ತಾವುಗಳು ಪುನರ್‌ವಸತಿ ಕೇಂದ್ರಗಳಲ್ಲಿ ಸಮಸ್ಯೆಗಳ ನಡುವೆ ಬದುಕುವ ಜನರ ಬಗ್ಗೆ ಕಾಳಜಿಯನ್ನು ವಹಿಸಿ ಅವರಿಗೂ ಉತ್ತಮ ಬದುಕನ್ನು ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ನಮ್ಮ ಭಾರಿ ನೀರಾವರಿ ಸಚಿವರಾದ ಮಾನ್ಯ ಶ್ರೀ ಹೆಚ್.ಕೆ. ಪಾಟೀಲರವರು ಕೃಷ್ಣಾ ನದಿ ನೀರಾವರಿ ಯೋಜನೆಗಳ ಬಗ್ಗೆ ಹೆಚ್ಚು ಕಾಳಜಿಯನ್ನು ಇಟ್ಟುಕೊಂಡಿರತಕ್ಕಂಥ ಒಬ್ಬ ನಾಯಕರು. ಅವರು ಹಿಂದೆ ವಿರೋಧಪಕ್ಷದ ನಾಯಕರಾಗಿದ್ದಾಗ "ಕೇಳಿ ಕೃಷ್ಣೆಯ ಕೂಗು" - ಎನ್ನುವ ಒಂದು ಪುಸ್ತಕವನ್ನು ಬರೆದು ಹಾಗೂ ಬರೆಯುವುದಕ್ಕಿಂತ ಮೊದಲು ಆ ಪ್ರದೇಶಗಳಲ್ಲೆಲ್ಲಾ ತಿರುಗಿ ಪರಿಸ್ಥಿತಿಯ ಅಧ್ಯಯನವನ್ನು ಕೂಡ ಮಾಡಿಕೊಂಡವರು. ಆ ಬಗ್ಗೆ ನನ್ನ ಸಂತೋಷವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಆದರೆ ವಾಸ್ತವಾಂಶವಾಗಿ ಈ ಕುರಿತು ಸುಪ್ರೀಂ ಕೋರ್ಟ್ ಏನು ತೀರ್ಮಾನವನ್ನು ಕೊಟ್ಟಿದೆ, ಹಾಗೆ ತೀರ್ಮಾನ ಕೊಟ್ಟಿ ಪ್ರಮಾಣದಲ್ಲಿಯಾದರೂ ಅಲ್ಲಿ ನೀರನ್ನು ನಿಲ್ಲಿಸುವುದಕ್ಕೆ ನಮ್ಮಿಂದ ಆಗಿಲ್ಲ. ಅದಕ್ಕೆ ಬಹಳ ಮುಖ್ಯವಾಗಿರತಕ್ಕಂಥ ಕಾರಣ, ಬಾಗಲಕೋಟೆಯಲ್ಲಿ ನಿರಾಶ್ರಿತರಾಗಿರತಕ್ಕಂಥ ಜನರ ಸ್ಥಳಾಂತರ ಮತ್ತು ಅವರಿಗೆ ಬೇಕಾಗಿರತಕ್ಕಂಥ ಎಲ್ಲಾ ವ್ಯವಸ್ಥೆಗಳನ್ನು ಮಾಡಲಿಕ್ಕೆ ಆಗಿಲ್ಲ ಎಂಬುದು ತಿಳಿದು ಬಂದಿದೆ. ನಮ್ಮ ಸರಕಾರದ ಕೊನೆಯ ಅವಧಿಯಲ್ಲಿ ಶ್ರೀಮಾನ್ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ, ನಿರಾಶ್ರಿತರೆಲ್ಲರಿಗೂ ಸಹಿತ ಒಂದು ಪರಿಹಾರವನ್ನು ನಿಗದಿಪಡಿಸಿ, ಸರಕಾರಿ ಆಜ್ಞೆಯನ್ನು ಕೂಡ ಮಾಡಲಾಗಿತ್ತು. ಶ್ರೀಮಾನ್ ಕೆ.ಎನ್. ನಾಗೇಗೌಡರವರು ಆಗ ನೀರಾವರಿ ಸಚಿವರಾಗಿದ್ದರು. ಮಾನ್ಯ ನಾಗೇಗೌಡರು ಒಳ್ಳೆಯ ಕೆಲಸಗಳನ್ನು ಮಾಡಿದ್ದರು ಎಂದು ಆ ಭಾಗದ ಜನರೇ ಹೇಳುತ್ತಾರೆ. ಆದ್ದರಿಂದ ಆ ಪರಿಹಾರ ಹಣವು ಅಲ್ಲಿ ಸಂಬಂಧಪಟ್ಟವರಿಗೆ ಬಿಡುಗಡೆಯಾಗಿದೆಯೇ? ತಮಗೆ ಗೊತ್ತಿರುವ ಹಾಗೆ 516.6 ಮೀಟರ್‌ಗಳಷ್ಟು ಮಾತ್ರ ನಾವು ನೀರು ನಿಲ್ಲಿಸಿರುವುದು. ನಮಗೆ ಅವಕಾಶ ಸಿಕ್ಕಿರುವುದು519.6 ಮೀಟರ್‌ಗಳವರೆಗೆ. ಆಗ ಸುಮಾರು 10 ರಿಂದ 12 ಅಡಿಗಳವರೆಗೆ ಹೆಚ್ಚಿಗೆ ನೀರನ್ನು ನಾವು ನಿಲ್ಲಿಸಿದರೆ ಅದು ಎಲ್ಲಿಯವರೆಗೆ ಬರುತ್ತದೆ ಎಂಬ ಬಗ್ಗೆ ಬೆಂಚ್‌ಮಾರ್ಕ್‌ಗಳನ್ನು ಎಲ್ಲಾ ಕಡೆಗಳಲ್ಲಿ ಮಾಡಿದ್ದಾರೆ. ಆದ್ದರಿಂದ ಮುಂದಿನ ಮೇ-ಜೂನ್‌ನಲ್ಲಿ ನಾವು ಅಲ್ಲಿ ನೀರನ್ನು ನಿಲ್ಲಿಸಬೇಕಾಗುತ್ತದೆ. ಉಳಿದಿರತಕ್ಕಂಥ ನವೆಂಬರ್‌ನಿಂದ ಜೂನ್‌ವರೆಗೂ ಏನು ಸಂದರ್ಭ ಇರುತ್ತದೆ ಆ ಐದಾರು ತಿಂಗಳುಗಳು ಆ ಜನರಿಗೆ ಬಹಳ ಮಹತ್ವವಾಗಿರತಕ್ಕಂಥಾದ್ದು. ನಮ್ಮ ರಾಷ್ಟ್ರದಲ್ಲಿಯೇ

ದೊಡ್ಡ ನೀರಾವರಿ ಯೋಡನೆಯಾಗಿರತಕ್ಕಂಥ ಇದಕ್ಕೆ ಸಂಬಂಧಪಟ್ಟಂಥ ನಿರಾಶ್ರಿತರೆಲ್ಲರಿಗೂ ಸೂಕ್ತ ರೀತಿಯಲ್ಲಿ ಆಶ್ರಯ ಮತ್ತಿತರ ಸೌಲಭ್ಯಗಳನ್ನು ಕೊಡತಕ್ಕಂಥಾದ್ದು ನಮ್ಮ ಧರ್ಮ ಮತ್ತು ಆದ್ಯ ಕರ್ತವ್ಯವಾಗಿರುತ್ತದೆ. ಅಲ್ಲಿರತಕ್ಕಂಥ ಒಬ್ಬ ಒಳ್ಳೆಯ ಅಧಿಕಾರಿ ಶ್ರೀ ಜಾಮ್‌ದಾರ್‌ರವರನ್ನು ಈಗಲೂ ಅಲ್ಲಿಯೇ ಮುಂದುವರಿಸಿ ಒಳ್ಳೆಯ ಕೆಲಸವನ್ನು ಸರಕಾರ ಮಾಡಿದೆ. ಮುಂದಿನ ಜೂನ್‌ನಲ್ಲಿ ನಾವು 519.6ರಷ್ಟು ನೀರನ್ನು ಅಲ್ಲಿ ನಿಲ್ಲಿಸಬೇಕೆಂದಿದ್ದೇವೆ. ಅದಕ್ಕೆ ಬೇಕಾಗಿರುವಂಥ ಎಲ್ಲಾ ತಯಾರಿಗಳನ್ನು ನಾವು ಈ ಆರು ತಿಂಗಳುಗಳೊಳಗಾಗಿ ಮಾಡಲೇ ಬೇಕು. ಮಾನ್ಯ ಭಾರಿ ನೀರಾವರಿ ಸಚಿವರು ವಿಧಾನ ಪರಿಷತ್‌ನಲ್ಲಿ ನಿನ್ನೆ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಸಂತೋಷವನ್ನು ವ್ಯಕ್ತಪಡಿಸುತ್ತೇನೆ. 2003ನೇ ಇಸವಿಯೊಳಗಾಗಿ ಕೃಷ್ಣ ನೀರಾವರಿ ಯೋಜನೆಯೊಳಗಿನ ಎಲ್ಲಾ ಯೋಜನೆಗಳನ್ನು ಮುಗಿಸಬೇಕಾಗಿದ್ದು ಅದನ್ನು ಒಂದು ವರ್ಷ ಮುಂಚಿತವಾಗಿಯೇ ನಾವು ಮುಗಿಸುತ್ತೇವೆ. ಇದಕ್ಕೆ ಇಂತಿಷ್ಟು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆ ಹಣವನ್ನು ನಾವು ಆಯವ್ಯಯದಲ್ಲಿ ಮತ್ತು ಬೇರೆ ಬೇರೆ ರೀತಿಯಲ್ಲಿ ಹಣ ಸಂಗ್ರಹ ಮಾಡಿ ಹಣದ ಕೊರತೆ ಇಲ್ಲದ ಹಾಗೆ ಕ್ರಮ ಜರುಗಿಸುತ್ತೇವೆ ಎಂದು ಹೇಳಿಕೆ ಕೊಟ್ಟಿರುವುದು ಸ್ವಾಗತಾರ್ಹವಾದ ವಿಷಯವಾಗಿದೆ. ಹೀಗೆ ಹೇಳಿಕೆಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಸಹಿತ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿರುವುದು ಅಗತ್ಯವಿದೆ. ಆ ಬಗ್ಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ. ಬಚಾವತ್-ಬಿ ಅವಾರ್ಡ್‌ನ ಪ್ರಾಕಾರ ನಾವು ಯಾವರೀತಿಯಲ್ಲಿ ನೀರನ್ನು ಉಪಯೋಗಿಸಿಕೊಳ್ಳಬೇಕೆಂಬ ಬಗ್ಗೆ ಇನ್ನೂ ಈ ಸದನದಲ್ಲಿಯೂ ಚರ್ಚೆಯಾಗಿಲ್ಲ ಮತ್ತು ಸರಕಾರವು ಕೂಡ ಯಾವುದೇ ತೀರ್ಮಾನಕ್ಕೆ ಬಂದಿಲ್ಲ. ನೀರಾವರಿ ತಜ್ಞರನ್ನು ಮತ್ತು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ನೀರನ್ನು ಯಾವರೀತಿಯಾಗಿ ಉಪಯೋಗಿಸ ಬೇಕೆಂಬ ನಿಲುವಿಗೆ ಬರುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಬಹುಶಃ ಈ ಅಧಿವೇಶನದ ಸಂದರ್ಭದಲ್ಲಿ ನಮ್ಮೆಲ್ಲರನ್ನೂ ಕರೆಯುತ್ತಾರೆ ಮತ್ತು ಆ ಚರ್ಚೆಗೆ ಮಾನ್ಯ ಅಧ್ಯಕ್ಷರು ವೇಳೆ ನಿಗದಿಯನ್ನು ಮಾಡುತ್ತಾರೆ ಎಂದು ನಾನು ಭಾವಿಸುತ್ತೇನೆ. ಇದು ಬಹಳ ಮುಖ್ಯವಾಗಿರತಕ್ಕಂಥ ವಿಚಾರ. ತಾವುಗಳು ನೀಡಿದ ಹೇಳಿಕೆಯಂತೆ ಈಗಿರತಕ್ಕಂಥ ನೀರನ್ನು 2002ನೇ ಇಸವಿಯೊಳಗಾಗಿ ಮುಗಿಸುತ್ತೀರೋ ಅಥವಾ ಬೇರೆಯದನ್ನೂ ಮಾಡಲು ತಯಾರಿಯನ್ನು ಮಾಡುತ್ತೀರೋ ಎಂಬುದು ಎರಡನೆಯ ವಿಚಾರ.

ಶ್ರೀ ಎಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ತಾಂತ್ರಿಕವಾಗಿ ತಪ್ಪು ಸಂದೇಶ ಎಲ್ಲೂ ಹೋಗಬಾರದೆಂಬ ಉದ್ದೇಶದಿಂದ ಆಂಧ್ರಸರ್ಕಾರ ಏನು (ಬಿ) ಸ್ಕೀಂನಲ್ಲಿ ನೀರನ್ನು ಆಂಟಿಸಿಪೇಟ್ ಮಾಡಿ ಕೆಲಸ ಕೈಗೊಳ್ಳುತ್ತದೆ, ಹಾಗೆ ನಮ್ಮ ಸರ್ಕಾರ ಏನೂ ಮಾಡಿಲ್ಲ ಮತ್ತು ಮಾಡುವುದಿಲ್ಲ. ಈಗಾಗಲೇ ರಾಜ್ಯ ಸರ್ಕಾರ ಕೃಷ್ಣ ಕಣಿವೆಯಲ್ಲಿ ತೆಗೆದುಕೊಂಡಿರುವ ಯೋಜನೆಗಳು ಅದರಲ್ಲೂ ಕೃಷ್ಣ ಮೇಲ್ದಂಡೆ ಯೋಜನೆಗಳೇನಿವೆ ಅವು ಯಾವುವು ಎಂಬುದು ಪ್ರಶ್ನೆ. ಉತ್ತರವಾಗಿ ವಿವರವನ್ನೆಲ್ಲ ಕೊಟ್ಟು ಆ ಎಲ್ಲ ಕಾಮಗಾರಿಗಳನ್ನು 2002ರೊಳಗೆ ಮುಗಿಸುತ್ತೇವೆಂದು ನಾವು ಹೇಳಿಕೆ ಮಾಡಿದ್ದೇವೆ. ಸ್ಕೀಂ ಎ, ಬಿ ಎಂಬ ವಿವರಕ್ಕೆ ಹೋಗಿಲ್ಲ. ಸದ್ಯ ಅದರ ಬಗ್ಗೆ ಚರ್ಚೆ ಬೇಡ ಎಂಬುದು ನನ್ನ ಅಭಿಪ್ರಾಯ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಚಿವರು ಬಹಳ ಸೂಕ್ಷ್ಮಮತಿಗಳಿದ್ದಾರೆ, ಅದನ್ನು ಸ್ವಾಗತಿಸುತ್ತೇನೆ. ಏಕೆಂದರೆ ಪತ್ರಿಕೆಗಳಲ್ಲಿ ಇಂದು ಬಂದಿರುವ ವರದಿಯಂತೆ ರಾಜ್ಯಕ್ಕೆ ಬರುವ ನೀರಿನ ಬಗ್ಗೆ ಯಾವುದೇ ವಿವಾದಕ್ಕೆ ಸರ್ಕಾರ ಎಡೆಮಾಡಿಕೊಡಬಾರದು. ನೀವು ನೀರಾವರಿ ಸಚಿವರಾಗಿ ಕೊಡುವ ಹೇಳಿಕೆಗಳು, ಸರ್ಕಾರಿ ಮುಖಂಡರು ಕೊಡುವ ಹೇಳಿಕೆಗಳು ಕಳೆದ 25 ವರ್ಷದಲ್ಲಿ ಯಾವ್ಯಾವ ರೀತಿ ಪರಿಣಾಮವಾಗಿದೆ ಎಂಬುದು ತಮಗೆ ಗೊತ್ತಿದೆ. ಆದ್ದರಿಂದ ಅದನ್ನು ನಾನು ಪ್ರಸ್ತಾಪಿಸಲು ಹೋಗುತ್ತಿಲ್ಲ. ಸರ್ಕಾರ ಇದಕ್ಕಾಗಿ ಹೆಚ್ಚಿಗೆ ಹಣ ಎತ್ತಿಟ್ಟು, ಅಥವಾ ಕೃಷ್ಣ ಜಲಭಾಗ್ಯ ನಿಗಮದಿಂದ ಹೆಚ್ಚು ಹಣ ಸಂಗ್ರಹ ಮಾಡಿ ಅಲ್ಲಿ ಮುಖ್ಯವಾಗಿ ಕಾಲುವೆ ಕೆಲಸಗಳು ಆಗಬೇಕಾದ್ದು ಬಹಳ ಇದೆ. ಅದು ಮಂದಗತಿಯಲ್ಲಿ ಆಗುತ್ತಿರುವುದಕ್ಕೂ ಅನೇಕ ಕಾರಣಗಳಿವೆ. ಅದನ್ನು ಎಕ್ಸ್‌ಪಿಡೈಟ್ ಮಾಡಲು ನಾವು ಏನು ಮಾಡಬೇಕು? ಎಂಬುದು ಬಹಳ ಮುಖ್ಯ ವಿಚಾರ. ಅದರ ಬಗ್ಗೆಯೂ ಒಂದು ಹೇಳಿಕೆಯನ್ನು ಇವತ್ತು ಕೊಟ್ಟಿರುವುದನ್ನು ವಿಸ್ತರಿಸಿ ಯಾವ ಯೋಜನೆಯನ್ನು 2002ರೊಳಗೆ ಮುಗಿಸಬೇಕೆಂದಿದ್ದೀರ ಮತ್ತು ಬಿ ಸ್ಕೀಮಿನ ಯೋಜನೆಗಳ ಕುರಿತು ಯಾವ ರೀತಿಯ ಕಾರ್ಯಕ್ರಮ ಹಾಕಿಕೊಂಡಿದೆ ಎಂಬುದನ್ನೂ ಈಗ ಹೇಳಬೇಕೆಂದು ಸಚಿವರಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಅಧ್ಯಕ್ಷರೇ ಸಿಂಧ್ಯಾರವರು, ಮತ್ತು ಪೂಜಾರ್‌ರವರು ಬಾಗಲಕೋಟೆ ಮುಳುಗಡೆ ವಿಚಾರವಾಗಿ ಸರ್ಕಾರದ ಗಮನಕ್ಕೆ ಹಲವಾರು ವಿಚಾರಗಳನ್ನು ತಂದಿದ್ದಾರೆ. ಅವರಿಬ್ಬರೂ ವ್ಯಕ್ತಪಡಿಸಿದಂತೆ ಆಲಮಟ್ಟಿಯಲ್ಲಿ 515 ಮೀಟರ್‌ಗೆ ನೀರು ನಿಲ್ಲಿಸಿದ್ದೇವೆ. ಉಚ್ಚನ್ಯಾಯಾಲಯದ ಆದೇಶದ ಪ್ರಕಾರ ನಾವು 519.6 ಮೀಟರ್‌ವರೆಗೆ ನಿಲ್ಲಿಸುವುದಕ್ಕೆ ಅವಕಾಶವಿದೆ. ಒಂದೇ ಒಂದು ಕಾರಣದಿಂದ ನಾವು ಆ ಮಟ್ಟಕ್ಕೆ ಹೋಗಲಿಲ್ಲ. ಪುನರ್ವಸತಿ ಕೆಲಸ ನಮಗೆ ಸಮಾಧಾನವಾಗುವಷ್ಟು ಪೂರ್ಣಗೊಂಡಿರಲಿಲ್ಲ. ಏನೂ ತಾಂತ್ರಿಕ ತೊಂದರೆ ಇಲ್ಲವೆಂದು ನಾವು ಒಮ್ಮೆಲೆ 519 ಮೀಟರ್ ನೀರು ನಿಲ್ಲಿಸಿದ್ದರೆ ಸಾಕಷ್ಟು ರೈತರನ್ನು ನಾವು ಒಕ್ಕಲೆಬ್ಬಿಸಬೇಕಾಗಿತ್ತು. ಬಾಗಲಕೋಟೆಯ ಅನೇಕ ಕುಟುಂಬಗಳಿಗೆ ಅನಾನುಕೂಲವಾಗುತ್ತಿತ್ತು. ಏಷ್ಯಾದಲ್ಲೇ ಬಹುದೊಡ್ಡ ಪ್ರದೇಶ ಮುಳುಗಡೆ ಆಗುವಂತಹ ಯೋಜನೆ ಇದು. ಆ ಮಟ್ಟದಲ್ಲಿ ಪುನರ್ವಸತಿ ಕೆಲಸವೂ ಆಗಬೇಕಾಗಿದೆ. ಆದರೆ ಅನಿವಾರ್ಯವಾಗಿ ನಾವು 515ಕ್ಕೆ ನಿಲ್ಲಿಸಿದ್ದೇವೆ. ಒಮ್ಮೆಲೆ 519ಕ್ಕೆ ನಿಲ್ಲಿಸುವುದೂ ಇಲ್ಲ. ಹಂತಹಂತವಾಗಿ ಎಲ್ಲಿಯೂ ರೈತರಿಗೆ, ಜನರಿಗೆ ತೊಂದರೆ ಆಗದೆ ಅವರನ್ನು ಪುನರ್ವಸತಿ ಮಾಡುತ್ತ ಎತ್ತರ ಏರಿಸುತ್ತೇವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇವೆ. ಅಲ್ಲಿಗೆ ಜಿಲ್ಲಾ ಉಸ್ತುವಾರಿ ಸಚಿವರು ಬಂದಿಲ್ಲ ಅಂತ ಪೂಜಾರು ಹೇಳಿದರು ನಿಮಗೆ ಗೊತ್ತಿದೆ. ಅಲ್ಲಿಗೆ ನಾನು ಬಂದಾಗ ಸ್ವತಃ ನಾನೂ ನೀವೂ ಜೊತೆಯಲ್ಲೇ ಒಂದೂವರೆ ದಿವಸ ಅಡ್ಡಾಡಿದ್ದೇವೆ. ಯಾವ ಓಣಿಯನ್ನೂ ಬಿಡಲಿಲ್ಲ. ಯಾವ ಗಲ್ಲಿಯನ್ನೂ ಬಿಡಲಿಲ್ಲ. ನೀವು ಏನೇನು ಸಲಹೆ, ಮಾರ್ಗದರ್ಶನ ಮಾಡುತ್ತಿದ್ದಿರಿ ಅದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಸ್ಥಳದಲ್ಲೇ ನಿರ್ಣಯ ಮಾಡಿದೆ. ಬಸ್ ದರ ಜಾಸ್ತಿ ಆಂದಿರಿ, ಅದನ್ನು ಒಂದು ರೂಪಾಯಿಗೆ ಇಳಿಸಿ ನವನಗರಕ್ಕೆ ಹೋಗಿಬರಲು ವ್ಯವಸ್ಥೆ ಮಾಡಿದಿವಿ. ಕೆಲವರಿಗೆ ಹಕ್ಕುಪತ್ರ ಸಿಕ್ಕಿರಲಿಲ್ಲ. ನಾನು ಅಲ್ಲೇ ಕಮೀಷನರ್‌ಗೆ ನಿರ್ದೇಶನ ಕೊಟ್ಟೆ. ಸ್ಥಳೀಯ ಶಾಸಕರು, ಆ ಭಾಗದ ಲೋಕಸಭಾ ಸದಸ್ಯರು ಮತ್ತು ಆ ಭಾಗದ

ವಿಧಾನಸಭಾ ಸದಸ್ಯರು ಕೂತು ಇವತ್ತು ರಾತ್ರಿ 12ರೊಳಗೆ ಯಾರ್ಯಾರಿಗೆ ಕೊಡಬೇಕೋ ಅವರಿಗೆಲ್ಲ ಕೊಡಬೇಕು, ಒಂದು ವೇಳೆ ಸಮಯ ಸಾಲದಿದ್ದರೆ ನಾಳೆ ನೀವು ಕೂತು ಕೆಲಸ ಮಾಡಬೇಕು ಎಂದು ತಮಗೂ ವಿನಂತಿ ಮಾಡಿದೆ. ಅದರಂತೆ ತಾವೂ ಸಾಕಷ್ಟು ಶ್ರಮವಹಿಸಿ ಎಂಪಿ, ಎಂಎಲ್‌ಸಿಯವರೆಲ್ಲ ಸೇರಿ ಆ ಭಾಗದ ಜನರಿಗೆ ಅಂದರೆ 515ರವರೆಗೆ ಮುಳುಗಡೆಯಾದಾಗ ಯಾರಿಗೆ ಅನಾನುಕೂಲವಾಗಿತ್ತು ಅವರ ಸಮಸ್ಯೆಗಳನ್ನೆಲ್ಲ ಪರಿಹಾರ ಮಾಡಿದ್ದೀರಿ. ನಂತರ ಎರಡು ದಿವಸದಲ್ಲಿ ಮಾನ್ಯ ಜಗದೀಶ್ ಶೆಟ್ಟರ್ ಅವರು ಅಲ್ಲಿಗೆ ಬಂದಿದ್ದರು. ಅಲ್ಲಿ ಆಗಿರುವ ಕೆಲಸದ ಬಗ್ಗೆ ಅವರ ಮನಸ್ಸಿನಲ್ಲಿ ಬಹಳ ಖುಷಿ ಆಗಿದ್ದರೂ ಸ್ವಲ್ಪ ಟೀಕೆಯನ್ನು ಸಹಿತ ಮಾಡಿದರು. ಪೂಜಾರರು ಅವರಿಗೆ ಎಲ್ಲ ವಿಷಯ ಹೇಳಲಿಲ್ಲವೆಂದು ಕಾಣುತ್ತದೆ, ಪರವಾಗಿಲ್ಲ. ಈಗ ಎಲ್ಲಿಯವರೆಗೆ ನಾವು ನೀರು ನಿಲ್ಲಿಸಿದ್ದೇವೆ, ಅಲ್ಲಿವರೆಗಿನ ಜನತೆಗೆ ಪುನರ್ವಸತಿ ಸರಿಯಾಗಿ ಮಾಡಿಸಿರುವುದಲ್ಲದೇನೆ, ಕೆಲವು ಕಡೆ ಅವರಿಗೆ ಜಿಂಕ್‌ಶೀಟ್ ಕೊಡುವುದು ಅನಿವಾರ್ಯ, ಕೊಟ್ಟಿದ್ದೇವೆ ಅದರ ಜೊತೆಗೆ ಶಾಲೆ, ದವಾಖಾನೆ, ಪಡಿತರ ಆಗಲಿ ಇಂತಹ ನಾಗರೀಕ ಸೌಲಭ್ಯಗಳನ್ನು ಸೃಷ್ಟಿ ಮಾಡುವುದಾಗಲಿ ಆ ಎಲ್ಲ ಕೆಲಸಗಳನ್ನು ವಿರೋಧ ಪಕ್ಷದ ಸದಸ್ಯರಾದ ಮಾನ್ಯ ಪೂಜಾರರ ಸಮಾಧಾನಕ್ಕೆ ತಕ್ಕಂತೆ ಮಾಡಲಾಗಿದೆ. ಅಲ್ಲಿ ಜನರೂ ಖುಷಿಯಾಗಿದ್ದಾರೆ. ಇನ್ನು 516.2ಕ್ಕಿಂತ ಎತ್ತರದಲ್ಲಿರುವ ಜನ, ಅಂದರೆ ನಾವು ಆಲಮಟ್ಟಿಯಲ್ಲಿ 515 ನಿಲ್ಲಿಸಿದರೆ ಬಾಗಲಕೋಟೆಯಲ್ಲಿ ಅದು 516.2ವರೆಗೆ ಹಿನ್ನೀರು ನಿಲ್ಲುತ್ತದೆ. ಅಲ್ಲೀವರೆಗೆ ನಾವು ವ್ಯವಸ್ಥೆ ಮಾಡಿದ್ದೇವೆ. ಅದರ ಮುಂದಿನ ವ್ಯವಸ್ಥೆಗೂ ಸಾಕಷ್ಟು ಚುರುಕಾಗಿ ಕೆಲಸ ನಡೆದಿದೆ. ಹಣಕ್ಕೆ ಏನು ತೊಂದರೆ ಇಲ್ಲ. ಅಲ್ಲಿ ಕೆಲವು ಕಡೆ ಸರ್ವೆ ಫಾಲ್ಟ್ ಆಗಿದೆ ಎಂದು ನಮಗೆ ದೂರು ಬಂದಿದೆ. ಅದರಲ್ಲಿ ಸಾಕಷ್ಟು ಸತ್ಯ ಇದೆ. ಯಾವುದು ಮುಳುಗಡೆ ಆಗುವುದೆಂದಿದ್ದೆವೋ ಅದು ಕೆಲವು ಕಡೆ ಮುಳಗಿಲ್ಲ, ಇನ್ನು ಕೆಲವು ಕಡೆ ಪರಾವ ಪ್ರದೇಶ ಮುಳುಗಡೆ ಆಗುವುದಿಲ್ಲವೆಂದಿದ್ದೆವೋ ಅದು ಮುಳುಗಡೆಯಾಗಿದೆ. ಇಂತಹ ತೆಂದರೆಗಳ ಸಲುವಾಗಿಯೇ ಉದ್ಭವವಾಗಿರುವ ಸಮಸ್ಯೆಗಳ ಸಲುವಾಗಿ ನಾವೂ ಬಹಳ ಕಾಶಿಯಸ್ಸಾಗಿ ನೀರು ನಿಲ್ಲಿಸುತ್ತಿದ್ದೇವೆ. ನಾನು ಒಂದು ಭರವಸೆ ಕೊಡುತ್ತೇನೆ. ಬಹುಶಃ ಮುಂದಿನ ವರ್ಷದೊಳಗಾಗಿ 519.6ರವರೆಗೆ ನಾವು ನೀರು ನಿಲ್ಲಿಸಿದಾಗ ಹಿನ್ನೀರು ಎಲ್ಲೀವರೆಗೆ ನಿಲ್ಲುಸುತ್ತದೋ ಅಲ್ಲಿಯವರೆಗಿನ ಎಲ್ಲ ಸಂತ್ರಸ್ತರಿಗೆ ಪರಿಹಾರ ಕೊಡುವುದಾಗಲಿ ಪುನರ್ವಸತಿ ಮಾಡುವುದಾಗಲಿ ಸಂಪೂರ್ಣ ಮಾಡಿಬಿಡುತ್ತೇವೆ. ಇನ್ನು ಸಿಂಧ್ಯಾರವರು ಬಿ ಸ್ಕೀಂ ಬಗ್ಗೆ ಪ್ರಸ್ತಾಪಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಸಾರ್ವಜನಿಕ ತಿಳಿವಳಿಕೆಗಾಗಿ ಕೆಲವು ಹೇಳಿಕೆಗಳನ್ನು ಮಾಡಿದ್ದಾರೆ. 'ಬಿ' ಸ್ಕೀಂನ ಕಾಮಗಾರಿಗಳನ್ನು ಯಾವಾಗ ತೆಗೆದುಕೊಳ್ಳಬೇಕೆಂಬ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳ ಮುಖಂಡರ ಜೊತೆ ನಾವು ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರುತ್ತೇವೆಂದು ಹೇಳಿದ್ದಾರೆ. ಏತನ್ಮಧ್ಯೆ ತಂತ್ರಜ್ಞರ ಸಮಿತಿಯನ್ನು ನಾವು ರಚಿಸಿ ಬಿ ಸ್ಕೀಮಿನ ನಮ್ಮ ಪಾಲಿನ ನೀರನ್ನು ಹೇಗೆ ಬಳಸಿಕೊಳ್ಳಬೇಕೆಂದು ಸಲಹೆ ನೀಡಲು ಸೂಚಿಸಿದ್ದೇವೆ. ಆ ಸಮಿತಿಗೆ ಶ್ರೀ ಅಂಗಡಿಯವರು ಅಧ್ಯಕ್ಷರು, ಕ್ಯಾಪ್ಟನ್ ರಾಜಾರಾಂ ದೇಸಾಯಿಯಂತಹ ಹಿರಿಯ ತಂತ್ರಜ್ಞರನ್ನು ಕೂಡಿಸಿದ್ದೇವೆ. ಅವರು ಆ ಕೆಲಸ ಪ್ರಾರಂಭಿಸಿದ್ದಾರೆ. ನಮ್ಮ ನಿಲುವು ಏನಿರಬೇಕೆಂಬುದರ ಬಗ್ಗೆಯೂ ಈಗಾಗಲೇ ವಿರೋಧಿ ಪಕ್ಷದ ನಾಯಕರ ಜೊತೆ ಸರ್ಕಾರ ಸಮಾಲೋಚನೆ ಮಾಡಿದೆ.

ಶ್ರೀ ಸಿ. ಭೈರೇಗೌಡ : ಅಂತಹ ಸಭೆಯನ್ನು ಇದುವರೆಗೂ ಕರೆದಿಲ್ಲ. ಏನಾಗುತ್ತದೋ ಎಂದು ನಮಗೆ ಗೊತ್ತಿಲ್ಲ. ಆದ್ದರಿಂದ ತಾವು ಏನು ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಸ್ಟೇಟ್‌ಮೆಂಟ್ ಬಂದಿತ್ತು. 'ಬಿ' ಸ್ಕೀಮ್ ಬಗ್ಗೆ ಮುಂದೆ ಏನು ಮಾಡಬೇಕೆನ್ನುವ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆ ಮಾಡುತ್ತೇವೆಂದು ಬಳ್ಳಾರಿಯಲ್ಲಿ ಹೇಳಿದ್ದರು. ಅಸೆಂಬ್ಲಿಯಲ್ಲಿ ಚರ್ಚೆ ಮಾಡುವುದಾ? ಅಥವಾ ಎಲ್ಲಾ ಪಾರ್ಟಿಯವರನ್ನು ಕರೆಸಿ ಸಭೆಯಲ್ಲಿ ಚರ್ಚೆ ಮಾಡುವುದೋ?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಭಾರೀ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜಕೀಯ ಪಕ್ಷಗಳ ನಾಯಕರ ಜೊತೆ ಚರ್ಚೆ ಮಾಡುತ್ತಾರೆ. ಅವಶ್ಯ ಬಂದರೆ ಒಮ್ಮೆ ಫೈನಾಲ್ಸಿಗೆ ಬಂದಾಗ ನಾವು ಸದನಲ್ಲಿ ಇಡಬಹುದಾಗಿತ್ತು. "ಬಿ" ಸ್ಕೀಮನ್ನು ಯಾವ ರೀತಿ ಇಂಪ್ಲಿಮೆಂಟ್ ಮಾಡಬೇಕೆಂದು ನಮ್ಮ ಯೋಜನೆಗಳಿವೆ. ಅವನ್ನೆಲ್ಲಾ ರಾಜಕೀಯ ಪಕ್ಷಗಳ ನಾಯಕರ ಜೊತೆ ಚರ್ಚೆ ಮಾಡಿ, ಆಮೇಲೆ ಅವಶ್ಯವೆನಿಸಿದರೆ ಸದನದ ಗಮನಕ್ಕೆ ಇಟ್ಟು ಚರ್ಚೆ ಮಾಡುವುದಾದರೆ ಮಾಡೋಣ.

ಶ್ರೀ ಕರಡಿ ಸಂಗಣ್ಣ : ಮಾನ್ಯ ಅಧ್ಯಕ್ಷರೇ, ಬಚಾವತ್ ಯೋಜನೆಯ ಬಗ್ಗೆ ನಮ್ಮ ನಾಯಕರಾದ ಸಿಂಧ್ಯಾರವರು, ಬೈರೇಗೌಡರು ಮಾತನಾಡಿದ್ದಾರೆ. ಇವತ್ತು ನಾನು ಮಾನ್ಯ ಮುಂತ್ರಿಗಳಲ್ಲಿ ಕೇಳಿಕೊಳ್ಳುವುದಿಷ್ಟೆ. ಈಗ ಬಾಗಲಕೋಟೆ ನಿರಾಶ್ರಿತರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿದ್ದೀರಿ, ಮತ್ತು ತಾವು ಕೊಪ್ಪಳ ಜಿಲ್ಲೆಗೂ ಕೂಡ ಎರಡು ಸಾರಿ ಬಂದಿದ್ದಿರಿ.

ಶ್ರೀ ಹೆಚ್.ಕೆ. ಪಾಟೀಲ್ : ನಾವು "ಬಿ" ಸ್ಕೀಮ್,"ಎ" ಸ್ಕೀಮ್ ಬಗ್ಗೆ ಈಗ ಚರ್ಚೆ ಮಾಡುತ್ತಿಲ್ಲ. ನಾನು ಮಾನ್ಯ ಸಿಂಧ್ಯಾರವರಿಗೆ ಅದಕ್ಕೇನೆ ವಿನಂತಿ ಕೂಡ ಮಾಡಿದೆ. ಈ ಸಂದರ್ಭದಲ್ಲಿ ಅದರ ಬಗ್ಗೆ ವಿವರವಾದ ಚರ್ಚೆ ಬೆಡ. ನಾವು "ಬಿ" ಸ್ಕೀಮ್ ಬಗ್ಗೆ ಚರ್ಚೆ ಮಾಡುವಾಗ ಮಾಡೋಣವಂತೆ. ತಾವು ಕೊಪ್ಪಳದಲ್ಲಿ ಹಿರೇಹಳ್ಳದ ಪ್ರಾಜೆಕ್ಟ್ ಆಗಲಿ, ಮತ್ತೊಂದು ಪ್ರಾಜೆಕ್ಟನಲ್ಲಾಗಲಿ, ಬಾಗಲಕೋಟೆ ಸಂತ್ರಸ್ಥರಿಗೆ ಏನು ಪರಿಹಾರವನ್ನು ಕೊಟ್ಟೆವು, ಅದನ್ನು ಕೊಡಬೇಕು ಎಂದು ತಾವು ಸಾಕಷ್ಟು ಸಂದರ್ಭದಲ್ಲಿ ನನ್ನ ಗಮನಕ್ಕೂ ತಂದಿದ್ದೀರಿ.

ಶ್ರೀ ಕರಡಿ ಸಂಗಣ್ಣ : "ಬಿ" ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವಾಗ ಕೆಲವು ಪ್ರದೇಶಗಳು ಮುಳುಗುತ್ತವೆ ಎಂದು ಹೇಳಿ ವರದಿಯನ್ನು ಕೊಟ್ಟಿದ್ದರು. ಅವು ಮುಳುಗಿಲ್ಲ. ಕೆಲವು ಪ್ರದೇಶಗಳು ಮುಳುಗುವುದಿಲ್ಲ ಎಂದಿದ್ದು ಅವುಗಳು ಮುಳುಗಿವೆ. ನಮ್ಮ ಹಿರೇಹಳ್ಳದ ಸಾಮರ್ಥ್ಯವೇನೆಂದರೆ 1.6 ಟಿಎಂಸಿ ಶೇಖರಣೆ ಸಾಮರ್ಥ್ಯ ಇದೆ. ಮೊನ್ನೆ ಬರೀ 5 ಟಿಎಂಸಿ ವಾಟರನ್ನು ನಿಲ್ಲಿಸಿದರೆ ನಮ್ಮ ಅರಗೇರಿ ಗ್ರಾಮ ಒಂದೇ ಮುಳುಗಡೆಯಾಗುತ್ತದೆ ಎಂದು ರಿಪೋರ್ಟ್ ಇದೆ. ಆದರೆ ಬೇರೆ ಬೇರೆ ಗ್ರಾಮಗಳು ಕೂಡ ಆ ನೀರಿನಿಂದ ತೊಂದರೆಗೆ ಒಳಪಟ್ಟಿವೆ. ಆ ಗ್ರಾಮಸ್ಥರು ಆ ದಿನ ಮುದ್ದಾಂ ಬಂದು ನಾವು ಸಾಯುತ್ತಿದ್ದೇವೆ, ಗೇಟ್ ಓಪನ್ ಮಾಡಿ ಎಂದು ಕೇಳಿದರು. ಹೀಗಾಗಿ ಈ ರಿಪೋರ್ಟ್ ಎಫ್.ಆರ್.ಎಲ್. ಸರ್ವೆ ಏನು ಮಾಡಿದ್ದಾರೆ, ಅದು ತಪ್ಪಿದೆಯೆಂದು ಜನರ ಅಭಿಪ್ರಾಯವಿದೆ. ಅದಕ್ಕೋಸ್ಕರ ನೀವು ಮುಂದಿನ ವರ್ಷದಲ್ಲಿ 20 ಸಾವಿರ ಎಕರೆಗೆ ನಾವು ನೀರಾವರಿಯನ್ನು ಮಾಡುತ್ತೇವೆಂದು ಹೇಳಿ ಇದೇ ತಿಂಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಿ ತಾವು ಕೂಡ ಅದಕ್ಕೆ ಸಹಕಾರವನ್ನು ಮಾಡಿದ್ದೀರಿ, ಅದಕ್ಕೆ ನಾವು ಸ್ವಾಗತವನ್ನು ಮಾಡುತ್ತೇವೆ. ಆದರೆ ಮುಂದಿನ ಸಾಲಿನಲ್ಲಿ

ನಾವ ಪೂರ್ಣ ಪ್ರಮಾಣದಲ್ಲಿ ನೀರನ್ನು ನಿಲ್ಲಿಸಿದರೆ ಅಲ್ಲಿರುವ ಹಳ್ಳಿಗಳಿಗೆ ತೊಂದರೆಯಾಗುತ್ತದೆ. ಲ್ಯಾಂಡ್‌ಗಳೂ ಕೂಡ ಹೆಚ್ಚು ಮುಳುಗಡೆಯಾಗುತ್ತದೆ. ಮೊನ್ನೆ ಮಳೆಯ ವರದಿ ನೋಡಿದಾಗ ಗೊತ್ತಾಗುತ್ತದೆ. ಅದಕ್ಕೇನು ಪರಿಹಾರವನ್ನು ಹಾಕಿಕೊಂಡಿದ್ದೀರಿ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ನಾನು ಇಷ್ಟೇ ಹೇಳುತ್ತೇನೆ, ಯಾವುದೇ ಯೋಜನೆ ಇರಲಿ, ನಮ್ಮ ಸರ್ವೆ ಎಲ್ಲಾದರೂ ತಪ್ಪು ಎಂದು ಅನಿಸಿದರೆ ರೀಸರ್ವೆ ಮಾಡುತ್ತೇವೆ. ಏಕೆಂದರೆ ತಮಗೆ ಗೊತ್ತಿದೆ. ಹಿರೇಹಳ್ಳದ ಪ್ರಾಜೆಕ್ಟ್ ಸರ್ವೆಯಾಗಿದ್ದು 1960ಕ್ಕಿಂತ ಮೊದಲು. ಆದರೂ ಸಹಿತ ಇಷ್ಟು ವ್ಯತ್ಯಾಸಗಳು ಬರಬಾರದಾಗಿತ್ತು. ನಿಮ್ಮಲ್ಲಿಯೂ ವ್ಯತ್ಯಾಸ ಬಂದಿದೆ. ಆಲಮಟ್ಟಿಯಲ್ಲಿ ಕೆಲವು ಮಟ್ಟಿನ ವ್ಯತ್ಯಾಸಗಳು ಬರುತ್ತವೆ. ಅವುಗಳನ್ನು ಸರಿಪಡಿಸಿಕೊಂಡು ಸರಿಯಾದ ಸರ್ವೆಯಿಂದ ನಾವು ಮುಂದುವರಿಯಬೇಕಾಗುತ್ತದೆ. ಎಲ್ಲೆಲ್ಲಿ ಆ ನ್ಯೂನತೆಗಳು, ಲೋಪಗಳು ನಮಗೆ ಕಂಡುಬಂದಿವೆ, ಅಲ್ಲಿ ನಾವು ರೀಸರ್ವೆ ಸಹಿತ ಮಾಡುವುದಕ್ಕೆ ಹಿಂದುಮುಂದು ನೋಡುವುದಿಲ್ಲ. ಇನ್ನೊಂದು ತಾವು ಪರಿಹಾರದ ಬಗ್ಗೆ ಮೇಲಿಂದ ಮೇಲೆ ಪ್ರಸ್ತಾಪವನ್ನು ಮಾಡಿದಿರಿ. ನಾನು ಇದರ ಬಗ್ಗೆ ಇಷ್ಟೇ ಹೇಳುತ್ತೇನೆ. ಆ ಹಿರೇಹಳ್ಳದ ಭಾಗದ ಜನರಿಗೂ ಸಹಿತ ರೈತರಿಗೆ ಯೋಗ್ಯ ಪರಿಹಾರವನ್ನು ಕೊಡುವುದರಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕರಡಿ ಸಂಗಣ್ಣ : ಗುದ್ದಲಾಪುರ ವಿಲೇಜ್ ಸ್ಥಳಾಂತರಗೊಳ್ಳುತ್ತದೆ. ಉದ್ಘಾಟನಾ ಪೂರ್ವ ಅಲ್ಲಿ ಒಂದು ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ತಾವು ಆದೇಶ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೂಡ ರೀಹಾಬಿಲಿಟೇಷನ್ ಕಮಿಟಿ ಸದಸ್ಯರಿದ್ದೀರಿ. ಅಲ್ಲಿ ಮೀಟಿಂಗ್ ಸಹಿತ ಮಾಡಿದ್ದಾರೆ. ಆ ರೀಹಾಬಿಲಿಟೇಷನ್ ಸಲುವಾಗಿ ಏನು ಹಣ ಬೇಕೋ ಅದನ್ನು ಸರ್ಕಾರ ಕೊಡುತ್ತದೆ. ಅದರ ಬಗ್ಗೆ ಸದಸ್ಯರು ನಿಶ್ಚಿಂತೆಯಾಗಿರಲಿ ಬಾಗಲಕೋಟೆ ಮುಳುಗಡೆಯಾಗತಕ್ಕ ಪ್ರದೇಶದ ಸಂತ್ರಸ್ಥರಿಗೆ ಯಾವುದೇ ಅನಾನುಕೂಲವಿಲ್ಲದ ಹಾಗೆ, ಅವರಿಗೆ ಹೆಚ್ಚಿನ ತೊಂದರೆ ಮುಟ್ಟಿಸದ ಹಾಗೆ ಸರ್ಕಾರ ಎಲ್ಲಾ ಕಾರ್ಯಕ್ರಮವನ್ನು ಕೈಗೊಳ್ಳುತ್ತದೆ. ನನಗೆ ಗೊತ್ತಿದೆ. ಅಲ್ಲಿ ಜನರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಬೇಕೆಂದರೆ ನಾವು ಎಷ್ಟೇ ಒಳ್ಳೆಯ ಪರಿಸ್ಥಿತಿಯನ್ನು, ವಾತಾವರಣವನ್ನು ನಿರ್ಮಾಣ ಮಾಡಿದರೂ ಸಹಿತ ಭಾವನಾತ್ಮಕವಾಗಿ ಅವರು ಆ ಸ್ಥಳದಿಂದ ನಿರ್ಗಮಿಸುವುದು ಬಹಳ ಕಷ್ಟವೆನಿಸುತ್ತದೆ. ಏಕೆಂದರೆ ಮನೆ ಎಂದರೆ ಕೇವಲ ನಾಲ್ಕು ಗೋಡೆ ಮಧ್ಯೆಯಲ್ಲಿ ಇರುವುದಿಲ್ಲ. ಮನೆಯೆಂದರೆ ಅಲ್ಲಿ ಬನ್ನಿಗಿಡ ಇರುತ್ತದೆ. ಅದಕ್ಕೆ ಧಾರ್ಮಿಕ ಅಟ್ಯಾಚ್‌ಮೆಂಟ್ ಇರುತ್ತದೆ. ಅದೇ ರೀತಿಯಾಗಿ ನಮ್ಮ ಅಜ್ಜ ಇದ್ದರು, ನಮ್ಮ ಮುತ್ತಜ ಇದ್ದರು, ನಮ್ಮ ಮನೆತನ, ಸಂಸ್ಕೃತಿ, ಎಲ್ಲವನ್ನೂ ನಾವು ಮರೆತು ಮತ್ತೊಂದು ಕಡೆಗೆ ಹೋಗಿ ನಾವು ಜೀವನವನ್ನು ಪ್ರಾರಂಭ ಮಾಡಬೇಕಾಗುತ್ತದೆ. ಆದ್ದರಿಂದ ಅವರಿಗೆ ಕಷ್ಟವಾಗುವುದೇನೊ ನಿಜ. ಆದರೆ ಕಷ್ಟವಾದರೂ ಸಹಿತ ಇದೊಂದು ರಾಷ್ಟ್ರೀಯ ಯೋಜನೆ. ಈ ದೇಶಕ್ಕಾಗಿ ನಾವು ಈ ತೊಂದರೆಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ ಭಾವಿಸಿ ಆ ಭಾವನೆಯನ್ನು ಪೂಜಾರ್‌ರವರು ತಂದುಕೊಂಡು ಈ ಯೋಜನೆಯನ್ನು ನಾವು ಸಂಪೂರ್ಣಗೊಳಿಸುವುದರಲ್ಲಿ ತಾವು ಸಹಕಾರ ಮಾಡುತ್ತೀರಿ ಮತ್ತು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ನಾನು ಆ ಸ್ಥಳಕ್ಕೆ ಹೋಗಿ ಬಂದಿದ್ದೇನೆ. ಅನೇಕ ವಿಚಾರಗಳ ಬಗ್ಗೆ ತಾವು ಈಗ ಉತ್ತರವನ್ನು ಕೊಟ್ಟಿದ್ದೀರಿ. ಅಲ್ಲಿ ಈ ನೀರು ಬಂದು ನಿಂತಿರುವ ಕಡೆ ಸ್ಯಾನಿಟರಿ ಕಂಡೀಷನ್ಸ್ ಬಹಳ ವರ್ಸ್ಟ್ ಇದೆ. ಅಲ್ಲಿ ಕಸಕಡ್ಡಿ, ಮತ್ತೆ ಸತ್ತ ಪ್ರಾಣಿಗಳು, ಎಲ್ಲಾ ಇದೆ. ಅಲ್ಲಿ ಮನುಷ್ಯರಂತೂ ಓಡಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ವಾಸ ಮಾಡುವುದಕ್ಕೂ ಸಾಧ್ಯವಿಲ್ಲ. ಮೂಗು ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ಅಲ್ಲಿದೆ. ಅಲ್ಲೊಂದು ಕಡೆ ಸತ್ತವರನ್ನು ಸುಡುವ ಜಾಗ ಸಹಾ ಇದೆ. ಮತ್ತೆ ಮನೆಗಳಿಗೂ ಕೂಡ ನೀರು ನುಗ್ಗಿರುವುದು ಇದೆ. ಬಹಳ ಹೊಲಸಾಗಿರತಕ್ಕ ಪರಿಸ್ಥಿತಿ ಇದೆ. ರೋಗರುಜಿನಗಳು ಅಲ್ಲಿ ಯಾವಾಗಲೂ ಹರಡುತ್ತವೆ. ಈಗ ಏನಾಗಿದೆಯೋ, ನನಗೆ ಇವತ್ತಿನ ಪರಿಸ್ಥಿತಿ ಗೊತ್ತಿಲ್ಲ. ನಾವು ಹೋದಾಗ ಅಲ್ಲಿರತಕ್ಕ ಪರಿಸ್ಥಿತಿ ನೋಡಿದಾಗ ಸ್ವಚ್ಛತೆ ಎನ್ನುವುದು ಲವಲೇಶವೂ ಇರಲಿಲ್ಲ. ಬಹಳ ಅಪಾಯಕರವಾದ ಪರಿಸ್ಥಿತಿ ಅಲ್ಲಿದೆ. ದಯವಿಟ್ಟು ತಾವು ಅದರ ಬಗ್ಗೆ ಕ್ರಮ ತೆಗೆದುಕೊಂಡು ಅದಕ್ಕೆ ಪ್ರಥಮ ಆದ್ಯತೆಯನ್ನು ಕೊಡಬೇಕೆಂದು ಹೇಳಿ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಭೈರೇಗೌಡರು ಹೇಳಿದ್ದರಲ್ಲಿ ಸಾಕಷ್ಟು ಅರ್ಥವಿದೆ ನಿಜ. ಮೊದಲನೇ ಸಲ ನಾವು ನೀರನ್ನು ನಿಲ್ಲಿಸಿರುವುದರಿಂದ ಬಾಗಲಕೋಟೆಯ ಹಲವಾರು ಗುಡಿಸಲು ಮೊದಲು ಮಾಡಿಕೊಂಡು ಈಗಾಗಲೇ ಅವುಗಳೆಲ್ಲಾ ನೀರಿನಲ್ಲಿವೆ. ಎಲ್ಲಿ ಈಗ ನೀರು ಬಂದಿದೆ ಅದು ಬಾಗಲಕೋಟೆಯವರಿಗೆ ಗೊತ್ತಿದೆ. ಒಂದು ರೀತಿ ಕೊನೆಯ ಭಾಗವದು. ನಮ್ಮೆಲ್ಲಾ ಶೌಚಾಲಯಗಳ ಜಾಗ ಅಲ್ಲಿತ್ತು. ಅದರಿಂದ ಅಲ್ಲಿ ಹೆಚ್ಚು ನೀರು ಗಲೀಜು ಕಾಣುತ್ತದೆ. ಆದರೂ ಸಹಿತ ನಾವೇನು ಅದಕ್ಕೆ ಔಷಧಿಯನ್ನು ಸಿಂಪಡಿಸಬೇಕು, ಮತ್ತು ಆರೋಗ್ಯ ದೃಷ್ಟಿಯಿಂದ ಏನು ಕ್ರಮ ತೆಗೆದುಕೊಳ್ಳಬೇಕು, ಅದರ ಬಗ್ಗೆ ಸರ್ಕಾರ ನಿಗಾವಹಿಸುತ್ತದೆ.

ಶ್ರೀ ಪಿ.ಎಚ್. ಪೂಜಾರ್ : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಸರ್ವೆ ಕಾರ್ಯ ಕುರಿತಂತೆ ಹೇಳಿದರು. ಸರ್ವೆಯಾಗಿದೆ, 15 ರವರೆಗೆ ನೀರು ನಿಂತಿದೆ. ಬಾಗಲಕೋಟೆಯಲ್ಲಿ 16.2 ವರೆಗೆ ನೀರು ನಿಂತಿದೆ ಎಂದು ಹೇಳಿದರು. ಅವರೇ ಬಂದಾಗ ಅನೇಕ ಜನ ದೂರನ್ನು ಕೊಟ್ಟರು. ನಮ್ಮ ಮನೆ ಬಿದ್ದುಹೋಗಿದೆ. ಸರ್ವೆಯಲ್ಲಿ ಏತಕ್ಕೆ ಬಂದಿಲ್ಲವೆಂದು ಕಂಪ್ಲೇಂಟ್ ಮಾಡಿದರು. ಒಂದೇ ಅಲ್ಲ. ಆ ರೀತಿಯ ಉದಾಹರಣೆಗಳು ನೂರಾರು ಬಾಗಲಕೋಟೆಯಲ್ಲಿದೆ. ಅವರ ಮನೆ ಮುಳುಗುತ್ತದೋ ಅಥವಾ ಇಲ್ಲವೋ ಎನ್ನುವ ಗ್ಯಾರಂಟಿ ಯಾರಿಗೂ ಗೊತ್ತಿಲ್ಲ. ಅದರಿಂದಾಗಿ ಎಲ್ಲರೂ ಅಲ್ಲಿ ಅಪೇಕ್ಷೆ ಮಾಡುತ್ತಿದ್ದಾರೆ. ಬಾಗಲಕೋಟೆಯ ಎಲ್ಲಾ ಜನರು ಪುನರ್‌ವಸತಿಗಾಗಿ ವಿಚಾರ ಮಾಡುತ್ತಿದ್ದಾರೆ. ಎನ್.ಜಿ.ಓ. ಮುಖಾಂತರ ರೀಸರ್ವೆಯನ್ನು ದಯವಿಟ್ಟು ಮಾಡಿಸಿ. ಅದಕ್ಕೇನು ವಿಶೇಷವಾಗಿ ಹಣ ಖರ್ಚಾಗುವುದಿಲ್ಲ. ಅವರ ಮುಖಾಂತರ ಸರ್ವೆಯನ್ನು ಮಾಡಿಸಿದರೆ ಎಷ್ಟರವರೆಗೆ ನೀರು ಬರುತ್ತದೆ. ಎಂಬುದು ಗೊತ್ತಾಗುತ್ತದೆ. ಇದನ್ನು ತಾವು ದಯವಿಟ್ಟು ಮಾಡಬಹುದಾ? ಇನ್ನು ಎರಡನೆಯದಾಗಿ, ಸರ್ಕಾರ ನೌಕರಿ ಕೊಡುವ ಬಗ್ಗೆ ಪ್ರಸ್ತಾವನೆಯನ್ನು ಮಾಡಿದ್ದೇವೆ. ಹಿಂದಿನ ಸರ್ಕಾರದಲ್ಲೂ ಕೂಡ ಇದರ ಬಗ್ಗೆ ಪ್ರಸ್ತಪ ಮಾಡಿದ್ದೇವೆ. 5 ಪರ್‌ಸೆಂಟ್ 10 ಪರ್‌ಸೆಂಟ್ ಕೊಡುವ ಯೋಜನೆಯನ್ನು ಆಗಲೇ ಹಾಕಿಕೊಂಡಿದ್ದರು. ಇವತ್ತು ನಮ್ಮ ಹೆಚ್.ಕೆ. ಪಾಟೀಲರು ಈ ಕುರಿತು ತೀರ್ಮಾನ

ತೆಗೆದುಕೊಳ್ಳುತ್ತೇವೆಂದು ಹೇಳಿ ನಮಗೆ ಭರವಸೆಯನ್ನು ಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಆ ನೌಕರಿ ಕೊಡುವ ವಿಚಾರದಲ್ಲಿ ಸರ್ಕಾರದ ತೀರ್ಮಾನವಾಗಿದೆಯೋ ಹೇಗೆ? ಆ ಸಂತ್ರಸ್ಥರ ಮಕ್ಕಳೇನಿದ್ದಾರೆ, ಮನೆ, ಮಠ ಎಲ್ಲಾ ಕಳೆದುಕೊಂಡು, ಉದ್ಯೋಗ, ಜಮೀನು ಕಳೆದುಕೊಂಡು ನಿರಾಶ್ರಿತರಾದ ಆ ಮಕ್ಕಳ ಭವಿಷ್ಯಕ್ಕಾಗಿ, ಆ ಕುಟುಂಬದ ಭವಿಷ್ಯಕ್ಕಾಗಿ ಸರ್ಕಾರ ಏನಾದರೂ ತೀರ್ಮಾನ ಮಾಡಿದೆಯೇ ಎಂದು ಕೇಳಬಯಸುತ್ತೇನೆ. ಇದರ ಜೊತೆಗೆ ಮಾನ್ಯ ಸಚಿವರು ಅಲ್ಲಿಗೆ ಬಂದಾಗ ಸಣ್ಣ ಸಣ್ಣ ಗುಡಿಸಲುಗಳಲ್ಲಿ ಬಾಡಿಗೆದಾರರು ಕೂಡ ಇದ್ದಾರೆ. ನದಿ ದಡದಲ್ಲಿ ಮನೆ ಕಟ್ಟಿ, ಅಲ್ಲಿ ಒಬ್ಬರಿಗೆ ಬಾಡಿಗೆದಾರರಿಗೆ ಕೊಟ್ಟಿದ್ದಾರೆ. ಬಾಡಿಗೆದಾರರಿಗೆ ಷೆಡ್‌ನಲ್ಲಿ ಇರಿಸುವ ಕೆಲಸ ಮತ್ತೆ ಮನೆಯ ಮಾಲೀಕರಿಗೂ ಆ ಕಡೆ ಇರಿಸುವ ಕೆಲಸವನ್ನು ಮಾಡಿದಿರಿ. ಇಬ್ಬರಿಗೆ ನಿವೇಶನವನ್ನು ಕೊಟ್ಟಿದ್ದಾರೆ. ಮನೆಯ ಮಾಲೀಕರಿಗೆ 22 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿರುವ ಬಾಡಿಗೆದಾರರು ಸುಮಾರು ಒಂದು ಸಾವಿರ ಜನರು ಇರಬಹುದು. ಅವರಿಗೆ 22 ಸಾವಿರ ರೂಪಾಯಿಗಳನ್ನು ಇವರಿಗೆ ಕೊಟ್ಟಂತೆ ಅವರಿಗೂ ಕೊಡಲಿಲ್ಲವೆಂದರೆ ಅವರು ಬಿಡುವುದೇ ಇಲ್ಲ. ಅಲ್ಲಿಯೇ ಅವರು ಇರುತ್ತಾರೆ. ನಾನೇ ಹೋಗಿ ಇದರ ಬಗ್ಗೆ ಪ್ರತ್ಯಕ್ಷವಾಗಿ ಮಾತನಾಡಿದೆ. ನೀವು ಆ ಕಡೆ ಹೋಗಬೇಕಲ್ಲ. ಇದೇ ಷೆಡ್‌ನಲ್ಲಿ ಪರ್ಮನೆಂಟ್ ಆಗಿ ಇರುವುದಕ್ಕಾಗುತ್ತದೆಯೇ ಎಂದರೆ ನಮಗೂ ರೊಕ್ಕ ಕೊಟ್ಟರೆ ಆ ಕಡೆ ಹೋಗುತ್ತೇವೆಂದು ಹೇಳುತ್ತಾರೆ.

2.10 ಪಿ.ಎಂ.

ಆ ದಿಸೆಯಲ್ಲಿ ಆ ಬಾಡಿಗೆದಾರನಿಗೆ ಎಕ್ಸ್‌ಗ್ರೇಷಿಯಾ ಅಮೌಂಟ್ ಕೊಡುವಂತಹ ಕಾರ್ಯಕ್ರಮ ಆಗಬೇಕು. ಬಡ ಬಾಡಿಗೆದಾರನಿಗೆ ಕೊಡಬೇಕು. ನಾನು ಶ್ರೀಮಂತರಿಗೆ ಏನೂ ಕೇಳುತ್ತಿಲ್ಲ. ಬಡ ಬಾಡಿಗೆದಾರನಿಗೆ, ನೌಕರದಾರರು ಅಲ್ಲದವರಿಗೆ ಕೊಡುವಂತಹ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನುವುದನ್ನು ಕೇಳುತ್ತಿದ್ದೇನೆ. ಇನ್ನು ಎರಡನೆಯ ವಿಚಾರ, ಶೆಟ್ಟಿ ಆಯೋಗ ರಚನೆ ಒಳ್ಳೆಯ ಬೆಳವಣಿಗೆ ಎಂದು ನಾನು ತಿಳಿದುಕೊಂಡಿದ್ದೇನೆ. ಶೆಟ್ಟಿ ಆಯೋಗವನ್ನು ಮಾನ್ಯ ಎಚ್.ಕೆ. ಪಾಟೀಲ್ ಅವರು ರಚನೆ ಮಾಡಿದ್ದಾರೆ. ಅವರು ಬಂದಿದ್ದರು. ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ನೀರು ನಿಂತಿದೆ. ಅಲ್ಲಿ ನಾನು ಹೇಳಿದೆ. ಅಲ್ಲಿ ದೊಡ್ಡ ದೊಡ್ಡ ಗುಳ್ಳೆಗಳು ಏಳುತ್ತಿದ್ದಾವೆ. ಗಾಜುಗಳು ಬರುತ್ತಿವೆ. ಬದುಕುವುದಕ್ಕೆ ಆಗುತ್ತಿಲ್ಲ. ಎಂತಹ ರೋಗ ಬರಬಹುದು? ಮಲೇರಿಯಾ ಅಥವಾ ಇನ್ನಾವುದೋ ರೋಗ ಗೊತ್ತಾಗುತ್ತಿಲ್ಲ. ಆ ರೀತಿಯಲ್ಲಿ ಜನ ರೋಗ ಪೀಡಿತರಾಗಿದ್ದಾರೆ. ಇವತ್ತು ತಾವು ಅಲ್ಲಿಗೆ ಪ್ರತ್ಯಕ್ಷವಾಗಿ ಬಂದು 519 ಮೀಟರ್‌ಗೆ ನಿಲ್ಲಿಸುವುದು ಒಳ್ಳೆಯದು. ಅದರಿಂದ ಎಷ್ಟು ಬಾಧಕ ಆಗಬಹುದು ಎನ್ನುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬಹುದು. ಆ ದಿಸೆಯಲ್ಲಿ ನಾನು ಮಾನ್ಯ ಸಚಿವರ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ. ಆ ಶೆಟ್ಟಿ ಆಯೋಗವನ್ನು ಇನ್ನೊಮ್ಮೆ ಕಳಿಸಿ. ಇವತ್ತು ಪ್ರಸಕ್ತ ಪರಿಸ್ಥಿತಿಯಲ್ಲಿ ಅಲ್ಲೇನು ತೊಂದರೆ ಆಗುತ್ತಿದೆ ಗಮನಿಸಲಿ. ನಿಜವಾಗಿ ಮರ್ಯಾದಸ್ಥರಿಗೆ ಬಾಧಕ ಆಗಬಹುದು. ಇದನ್ನು ತಿಳಿದುಕೊಳ್ಳುವುದಕ್ಕೆ ಒಂದು ಅವಕಾಶ ಇರುತ್ತದೆನೋ ಎಂಬ ವಿಚಾರ. ನಾನು ಮಾನ್ಯ ಮುಖ್ಯಮಂತ್ರಿಗಳ ಸಭೆಗಾಗಿ ಎತ್ತಾಯ ಮಾಡಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬರಬೇಕು ಎನ್ನುವ ಹಾರೈಕೆಯನ್ನು

ನಾವು ಮಾಡಿಕೊಂಡಿದ್ದೆವು. ಸುಖದ ಸಂದರ್ಭದಲ್ಲಿ ಅವರು ಬಂದಿದ್ದರು. ಮೊನ್ನೆ ಏಕೋ ಕೋಪಿಸಿಕೊಂಡರು. ಸನ್ಮಾನ್ಯ ಎಸ್.ಎಸ್. ಪಾಟೀಲ್ ಅವರು ಮುಂಡರಗಿಗೆ ಬಂದಾಗ ಮುಖ್ಯಮಂತ್ರಿಗಳ ಪದವಿ ಕಳೆದುಕೊಳ್ಳುತ್ತಾರೆ ಎನ್ನುವಂತಹ ಸಂದರ್ಭದಲ್ಲಿ ಬಾಗಲಕೋಟೆಗೆ ಏಕೆ ಬರುವುದಿಲ್ಲ ಎಂದು ನಾನು ಕೇಳಿದೆ. ನಾನು ಕೇಳಿದ್ದಕ್ಕೆ ಅವರು ಬಾಗಲಕೋಟೆಗೆ ಬಂದಿದ್ದೆ ಎನ್ನುವ ಉತ್ತರವನ್ನು ಕೊಟ್ಟರು. ಅವರು ಬಾಗಲಕೋಟೆಗೆ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಂತಹ ಸುಖದ ಸಂದರ್ಭದಲ್ಲಿ ಬಂದಿದ್ದಾರೆ. ಇವತ್ತು ಜನತೆ ಕಣ್ಣೀರಿನಲ್ಲಿ ಕೈತೊಳೆಯುವಂತಹ ಸಂದರ್ಭದಲ್ಲಿ ಏಕೆ ಬರುತ್ತಿಲ್ಲ? ತಮ್ಮ ಸರ್ಕಾರಕ್ಕೆ ಏನು ಆಗಿದೆ? ಎನ್ನುವಂತಹ ವಿನಂತಿಯನ್ನು ಕೂಡ ಮಾಡಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಆ ಕಡೆಗೆ ಬರುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇವತ್ತು ಇಲ್ಲಿಯವರೆಗೆ ಬಿ.ಟಿ.ಪಿ.ಎ.ಗೆ ಅಧ್ಯಕ್ಷರನ್ನು ನೇಮಕ ಮಾಡಲಿಲ್ಲ. ಒಂದು ವರ್ಷ ಆಯಿತು. ಬಿ.ಟಿ.ಪಿ.ಎ. ಅಧ್ಯಕ್ಷರ ಮುಖಾಂತರ ಅನೇಕ ಸಮಸ್ಯೆಗಳು ಪರಿಹಾರ ಆಗಬಹುದು. ಸನ್ಮಾನ್ಯ ಹೆಚ್.ಕೆ. ಪಾಟೀಲ್‌ರವರಿಗೆ ಈ ಸರ್ಕಾರದ ವತಿಯಿಂದ ಯಾರೂ ಬರುವಂತಹ ಅವಶ್ಯಕತೆ ಇಲ್ಲ. ಬಿ.ಟಿ.ಪಿ.ಎ. ಅಧ್ಯಕ್ಷರ ನೇಮಿಸುವಂತಹ ಕಾರ್ಯಕ್ರಮವನ್ನು ನೀವು ತಕ್ಷಣ ಹಾಕಿಕೊಳ್ಳಬಹುದಾ ಎನ್ನುವಂತಹ ಪ್ರಶ್ನೆ ಕೂಡ ಮಾಡುತ್ತಿದ್ದೇನೆ. ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಇಲ್ಲಿಯವರೆಗೆ ಏಳು ತಿಂಗಳಾಯಿತು. ಒಂದು ಸಭೆ ಮಾಡಿದ ಬಗ್ಗೆ ಮಾತ್ರ ನನ್ನ ಗಮನಕ್ಕೆ ತರುತ್ತಿದ್ದಾರೆ. 15 ದಿವಸಕ್ಕೊಮ್ಮೆ ಅವರು ಸಭೆ ಮಾಡುತಿದ್ದರೆ ಅಲ್ಲೇ ಅನೇಕ ಸಮಸ್ಯೆಗಳು ಪರಿಹಾರ ಆಗಬಹುದು. ಇಲ್ಲಿಯವರೆಗೆ ಬರುವಂತಹದು ಏನೂ ಇಲ್ಲ. ಅಲ್ಲಿ ಆಗಲಾರದಂತಹ ಸಮಸ್ಯೆಗಳು ಯಾವುದಾದರೂ ಉಳಿದಿದ್ದರೆ ಅದು ಗ್ರಾಮೀಣ ಇರಬಹುದು, ನಗರ ಇರಬಹುದು. ಎರಡಕ್ಕೂ ಕೂಡ ತಾವು ಸಮಿತಿಗಳನ್ನು ರಚನೆ ಮಾಡಿದ್ದೀರಿ. ಅದಕ್ಕೆ ತಾವು 15 ದಿವಸಕ್ಕೊಮ್ಮೆ ಅಥವಾ ಕನಿಷ್ಟ ತಿಂಗಳಿಗೊಮ್ಮೆ ಆದರೂ ಸಭೆಯನ್ನು ಕರೆದಿದ್ದರೆ ಒಳ್ಳೆಯ ಉಪಯೋಗ ಆಗಬಹುದಿತ್ತು. ಪರಿಹಾರ ನಿಶ್ಚಿತವಾಗಿ ಸಿಗುತ್ತಿತ್ತು. ಸರ್ಕಾರ ಏನೋ ಕೆಲಸ ಮಾಡುತ್ತದೆ ನಮ್ಮ ಪರವಾಗಿ, ಕಳಕಳಿ ಇದೆ ಎನ್ನುವಂತಹ ಭರವಸೆ ಆದರೂ ಮೂಡಬಹುದಾಗಿತ್ತು. ಇವತ್ತು ಸನ್ಮಾನ್ಯ ಎಚ್.ಕೆ. ಪಾಟೀಲ್ ಬಂದು ಹೋಗಿರುವುದನ್ನು ಬಿಟ್ಟರೆ ಬೇರೆ ಏನೂ ಕಾಣುತ್ತಿಲ್ಲ. ಅಲ್ಲಿ ನಾವು ಸಂಪೂರ್ಣ ಶೂನ್ಯದ ವಾತಾವರಣ ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಕೂಡ ಸನ್ಮಾನ್ಯ ಎಚ್.ಕೆ. ಪಾಟೀಲ್ ಅವರು ಸನ್ಮಾನ್ಯ ಚಿಮ್ಮನಕಟ್ಟಿಯವರು ಮುಂದಾಗಬಹುದೇನೋ ಎನ್ನುವಂತಹ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಸಭೆಯನ್ನು ನಮ್ಮ ಅನೇಕ ಸಂತ್ರಸ್ತ ಪ್ರತಿನಿಧಿಗಳು ಅಪೇಕ್ಷೆ ಮಾಡುತ್ತಿದ್ದಾರೆ. ಮುಖ್ಯ ಮಂತ್ರಿಗಳು ಬರಬೇಕು ಹಾಗೂ ಸನ್ಮಾನ್ಯ ಭಾರೀ ಕೈಗಾರಿಕಾ ಸಚಿವರೂ ಇದ್ದಾರೆ. ಸನ್ಮಾನ್ಯ ಕಂದಾಯ ಸಚಿವರೂ ಇದ್ದಾರೆ. ಇವರೆಲ್ಲರ ಒಂದು ವಿಶೇಷವಾದಂತಹ ಸಭೆ ಮೂರ್ನಾಲ್ಕು ಗಂಟೆ ಆಗಬೇಕು. ಪ್ರಸ್ತುತ ಇರುವಂತಹ ಸಮಸ್ಯೆಗಳನ್ನು ಕುರಿತಂತೆ ಚರ್ಚೆ ಮಾಡಲಿಕ್ಕೆ, ಉದ್ಯೋಗಾವಕಾಶಗಳನ್ನು ಹೆಚ್ಚಿಸಲಿಕ್ಕೆ ಏನೇನು ಮಾಡಬಹುದೋ, ಮತ್ತು ಅವರಿಗೆ ಅನ್ನ ಕೊಡುವ ದೃಷ್ಟಿಯಲ್ಲಿ ಏನೇನು ಮಾಡಬಹುದೋ ಆ ದಿಸೆಯಲ್ಲಿ ಒಂದು ಸಭೆ ಕರೆಯಬಹುದು. ಅದು ಜನಕ್ಕೆ ಗೊತ್ತುಪಡಿಸುವುದು ಆಗಬೇಕು. ಏಕೆಂದರೆ ಈಗಾಗಲೇ ಅನೇಕ ಜನ ಒತ್ತಾಯ ಮಾಡುತ್ತಿದ್ದೇವೆ. ಸನ್ಮಾನ್ಯ ಎಂಪಿ ಅವರಿಗೆ ಕೂಡ ಜವಾಬ್ದಾರಿ

ಕೊಟ್ಟಿದ್ದೆವು. ಒಂದೂವರೆ ಎರಡು ತಿಂಗಳು ಆಯಿತು. ಇವತ್ತಿನವರೆಗೆ ಸಭೆಯನ್ನು ಕರೆಯುವಂತಹ ಒಂದು ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಇದಕ್ಕೆ ಕೂಡ ನಾನು ಮಾನ್ಯ ಎಚ್.ಕೆ. ಪಾಟೀಲ್ ಅವರಲ್ಲಿ ವಿನಂತಿ ಮಾಡುತ್ತಾ ಈ ದಿಸೆಯಲ್ಲಿ ತಕ್ಷಣ ಕಾರ್ಯಪ್ರವೃತ್ತರಾಗಬೇಕು. ಇದು ಆಗಬಹುದಾ ಹೇಗೆ ಎನ್ನುವಂತಹ ವಿನಂತಿಯನ್ನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಈಗಾಗಲೇ ನಾವು, ಮಾನ್ಯ ಪೂಜಾರ್ ಅವರು, ಮಾನ್ಯ ಸಿಂಧ್ಯಾ ಅವರುಗಳು 69ರ ನಿಯಮದ ಅಡಿಯಲ್ಲಿ ಚರ್ಚೆ ಮಾಡಲಿಕ್ಕೆ ತಮ್ಮ ಕಡೆಗೆ ನಿನ್ನೆಯೇ ಸೂಚನೆ ಕೊಟ್ಟಿದ್ದೆವು. ಆದರೆ ಈ ವಿಷಯ ಇವತ್ತು ಶೂನ್ಯ ವೇಳೆಯಲ್ಲಿ ಚರ್ಚೆಗೆ ಬಂದಿದೆ. ತಾವು ಚರ್ಚೆಗೆ ಸ್ವಲ್ಪ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಈಗ ಬಾಗಲಕೋಟೆಯ ಪುನರ್‌ವಸತಿ ಸಮಸ್ಯೆ ಏನು ಇದೆ? ಅಲ್ಲಿಗೆ ನಾನು ಕೂಡ ವಿಸಿಟ್ ಕೊಟ್ಟಿದ್ದೆ. ಆಗ ನಮ್ಮ ಮಾನ್ಯ ಪೂಜಾರ್ ಅವರೂ ಇದ್ದರು. ನಮ್ಮ ಅಧಿಕಾರಿಗಳೂ ಇದ್ದರು. ಅಲ್ಲೇನು ಹಿನ್ನೀರು ಬಂತು, ಆ ಪ್ರದೇಶಕ್ಕೆ ಹೋಗಿದ್ದೆವು. ಮತ್ತು ಅಲ್ಲೇನು ಪುನರ್‌ವಸತಿಗೆ ಹೊಸ ಶೆಡ್ ಮಾಡಿದ್ದರು. ಪುನರ್‌ವಸತಿ ಸ್ಥಳ ಏನು ಮಾಡಿದ್ದಾರೆ ಅದನ್ನು ಕೂಡ ನೋಡಿ ಬಂದಿದ್ದೇವೆ. ಅಲ್ಲಿ ನಾವು ಹೋದಾಗ, ಒಂದು ರೀತಿಯಲ್ಲಿ ಅತಂತ್ರ ಆಗಿದ್ದೇವೆ ಎನ್ನುವ ಭಾವನೆ ಅಲ್ಲಿನ ಜನರಲ್ಲಿ ಇತ್ತು. ಅಂದರೆ ಕೆಲವು ಕಡೆ ಸರ್ವೆ ಮಾಡಿದ್ದಾರೆ. ಕೆಲವು ಕಡೆ ಸರ್ವೆ ಮಾಡಿಲ್ಲ. ಪರಿಹಾರ ಕೊಟ್ಟರು. ಒಂದು ಲೈನ್ ಇದ್ದಂತಹ ಮನೆಯವರಿಗೆ ಪರಿಹಾರ ಕೊಟ್ಟಿದ್ದಾರೆ. ಆದರೆ ಹಿಂದಿನ ಲೈನ್ ಮನೆಯವರಿಗೆ ಕೊಟ್ಟಿಲ್ಲ. ಅಥವಾ ಅಪೋಸಿಟ್ ಲೈನ್‌ನಲ್ಲಿ ಒಂದು ಮನೆಗೆ ಕೊಟ್ಟಿದ್ದಾರೆ. ಮತ್ತೊಂದು ಲೈನ್‌ಗೆ ಇಲ್ಲ. ಅಥವಾ ಪಕ್ಕದ ಮನೆಗೆ ಕೊಟ್ಟಿಲ್ಲ. ಈ ರೀತಿಯಾಗಿ ಸ್ವಲ್ಪ ಕನ್‌ಫ್ಯೂಷನ್ ಆಗಿದೆ. ಮಾನ್ಯ ಎಚ್.ಕೆ. ಪಾಟೀಲ್‌ರವರು ಹೇಳಿದರು. ಮಾನ್ಯ ಜಗದೀಶ್ ಶೆಟ್ಟರ್ ಅವರು ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರಿಗೆ ತೃಪ್ತಿ ಆಗಿದೆ ಎಂದು ಹೇಳಿದ್ದಾರೆ. ನೀವು ಕೆಲಸ ಮಾಡದ್ದೀರಿ. ನಾನು ಒಪ್ಪಿಕೊಳ್ಳುತ್ತೇನೆ. ಪುನರ್ ವಸತಿ ಬಗ್ಗೆ ಏನು ಕೆಲಸ ಕಾರ್ಯಕ್ರಮಗಳನ್ನು ಅಲ್ಲಿನ ಅಧಿಕಾರಿಗಳು ಮಾಡಬೇಕು. ಅದನ್ನು ಮಾಡಿದ್ದಾರೆ. ಆದರೆ ಇನ್ನೂ ಕೆಲವೊಂದು ಡಿಫೆಕ್ಟ್ಸ್ ಇದ್ದಾವೆ. ಆ ಡಿಫೆಕ್ಟ್ಸ್, ಸಣ್ಣದು ಇರಬಹುದು, ಅಥವಾ ದೊಡ್ಡದು ಇರಬಹುದು. ಆದರೆ ನೀವು 100 ಜನರಲ್ಲಿ 90 ಜನರಿಗೆ ಅಥವಾ 80 ಜನಕ್ಕೆ ಸಹಾಯ ಮಾಡಿ10, 20 ಜನ ಬಿಟ್ಟರೆ ಅಲ್ಲಿಯವರು ಆಕ್ರೋಶಕ್ಕೆ ಒಳಗಾಗುತ್ತಾರೆ. ಇವತ್ತು ಅಲ್ಲಿಯ ವಾತಾವರಣ ಹಾಗಾಗಿದೆ. ಒಂದು ಲೈನ್‌ನವರಿಗೆ ನೀವು ಸರ್ವೆ ಮಾಡಿ ಕಾಂಪೆನ್ಸೇಷನ್ ಫಿಕ್ಸ್ ಮಾಡಿ, ಅಕ್ಕಪಕ್ಕದ ಮನೆಯವರಿಗೆ ಬಿಟ್ಟಿರುವುದನ್ನು ನಾನು ಸ್ವತಃ ನೋಡಿದ್ದೇನೆ. ಅಗದಿ ನಮ್ಮ ಕಣ್ಣಿಗೆ ಕಾಣುವಂತಹುದು. ಇದರ ಬಗ್ಗೆ ಅಧಿಕಾರಿಗಳನ್ನು ಕೇಳಿದಾಗ ಹೌದು ಅಲ್ಲಿ ಸ್ವಲ್ಪ ಮನೆಗಳು ಮಿಸ್ ಆಗಿದೆ ಎಂದು ಹೇಳಿದರು. ಅಂದರೆ ಇಂತಹುದು ಎದ್ದು ಕಾಣುವಂತಹದು ಇದೆ. ಮತ್ತೆ ಬಾಗಲಕೋಟೆಯ ಜನರಲ್ಲಿ ಇನ್ನೊಂದು ಭಯ ಇದೆ. 519 ಮೀಟರ್ ಆದರೆ ಎಲ್ಲಿಯವರೆಗೆ ಮುಳುಗಡೆ ಆಗುತ್ತದೆ? ಎಲ್ಲಿಯವರೆಗೆ ಆ ಪ್ರದೇಶ ಬರಬಹುದು ಎನ್ನುವ ಭಯ ಇದೆ. ಇಡೀ ಬಾಗಲಕೋಟೆಯೇ ಮುಳುಗಿ ಹೋಗುತ್ತದೋ ಅಥವಾ ಮತ್ತೊಂದು ಕಡೆಗೆ ಆಗುತ್ತದೋ ಗೊತ್ತಿಲ್ಲ. ಈಗ ಕೆಲವು ಕಡೆ ಆಗಿದೆ. ಹೀಗಾಗಿ ಅದೂ ಒಂದು ಭಯದ ವಾತಾವರಣ ಇದೆ. ಅದನ್ನು ಮಾನ್ಯ ಸಚಿವರು ಸ್ವಲ್ಪ ಕ್ಲಾರಿಫೈ ಮಾಡಬೇಕು ಎನ್ನುವುದು

ಒಂದು ವಿಚಾರ. ಆಮೇಲೆ ಕೆಲವೊಂದು ಭಾಗದಲ್ಲಿ 7-8 ಹಳ್ಳಿಗಳಲ್ಲಿ ಹಿನ್ನೀರು ಬಂದಾಗ ನೀರು ಹೋಗಲಿಕ್ಕೆ ಮಾರ್ಗವೇ ಇಲ್ಲ. ಅದೊಂದು ಫೆಸಿಲಿಟಿ ಆಗುವಂತಹುದು ಬೇಕು. ಮತ್ತೊಂದು ಅಲ್ಲಿಸ ಶೆಡ್‌ಗೆ ಹೋದಾಗ ಒಂದು ಫ್ಯಾಮಿಲಿಯಲ್ಲಿ ಗಂಡ ಹೆಂಡತಿ ಇರುತ್ತಾರೆ. ಮೂರು ಫ್ಯಾಮಿಲಿ ಇರುತ್ತಾರೆ. ಜಾಯಿಂಟ್ ಫ್ಯಾಮಿಲಿಯವರಿಗೂ ಒಂದೇ ಶೆಡ್ ಕೊಟ್ಟಿರುವಂತಹದು ಇದೆ. ಒಂದೇ ಶೆಡ್‌ನಲ್ಲಿ ಮೂರು, ನಾಲ್ಕು ಫ್ಯಾಮಿಲಿ ಇರುವುದನ್ನು ನೋಡಿದ್ದೇನೆ. ಆಮೇಲೆ ನಾವು ಅಲ್ಲಿ ಇದ್ದಂತಹ ಅಧಿಕಾರಿಗಳಿಗೆ ಹೇಳಿದೆವು. ಕೊನೇಪಕ್ಷ ಇದನ್ನು ವಿಚಾರ ಮಾಡಿ. ನೀವೇ ಒಂದು ಡಿಸ್ಕ್ರಿಪ್‌ಷನರಿ ಪವರ್ ಯೂಸ್ ಮಾಡಿ, ಯಾರ್ಯಾರು ಮೂರು, ನಾಲ್ಕು ಫ್ಯಾಮಿಲಿಗಳವರು ಇದ್ದಾರೆ ಅವರಿಗೆ ಎರಡು ಶೆಡ್ ಕೊಡುವಂತಹುದು ಅಥವಾ ಮೂರು ಶೆಡ್ ಹಂಚಿ ಕೊಡುವಂತಹದು ಮಾಡಿ ಎಂದು ನಾವು ಹೇಳಿದ ಮೇಲೆ ಅವರು ಮಾಡಿದರೋ ಇಲ್ಲವೋ ಗೊತ್ತಿಲ್ಲ. ಮುಂದೆ ಏನಾಗಿದೆ ಎಂದು ಗೊತ್ತಿಲ್ಲ. ಈಗ ಮತ್ತೊಂದು ವಿಚಾರ ಪೂಜಾರ್ ವಕೀಲ್ ಅವರು ಹೇಳಿದರು. ಈ ರೀತಿ ಜನ ಏನು ಭಯಭೀತರಾಗಿದ್ದಾರೆ, ನಮಗೆ ಸರಿಯಾದ ಪರಿಹಾರ ಸಿಕ್ಕಿಲ್ಲ. ಅಥವಾ ನಮಗೆ ಶೆಡ್ ಸಿಕ್ಕಿಲ್ಲ ಅಥವಾ ನಮಗೆ ಏನೋ ಒಂದು ಅನ್ಯಾಯ ಆಗುತ್ತಿದೆ ಎನ್ನುವಂತಹ ವಾತಾವರಣ ಇದ್ದಾಗ ಸಂಬಂಧಪಟ್ಟ ಜಿಲ್ಲಾ ಮಂತ್ರಿಗಳು ಅಲ್ಲಿಗೆ ಹೋಗಿ ಬಂದಿದ್ದರು. ಮಾನ್ಯ ಎಚ್.ಕೆ. ಪಾಟೀಲ್ ಅವರು ಅಲ್ಲಿಗೆ ಹೋಗಿ ಬಂದಿದ್ದಾರೆ. ಅವರು ಹೋಗಿ ಬಂದ ಮಾರನೇ ದಿವಸ ನಾನು ಹೋಗಿದ್ದೆ. ಮಾನ್ಯ ಪಿ.ಜಿ.ಆರ್. ಸಿಂಧ್ಯಾ ಅವರೂ ಹೋಗಿ ಬಂದಿದ್ದಾರೆ. ಆದರೆ ಆ ಸಂದರ್ಭದಲ್ಲಿ ಜನ ನಮ್ಮ ಮುಂದೆ ಗೋಳು ಹೇಳಿಕೊಳ್ಳುತ್ತಾರೆ. ಮುಂದೆ ಪ್ರತಿನಿತ್ಯ ಅವರ ಗೋಳನ್ನು ಕೇಳುವವರು ಬೇಕಾಗುತ್ತದೆ. ಆ ರೀತಿ ಅಲ್ಲಿ ಜಿಲ್ಲಾ ಮಂತ್ರಿಗಳು ಇರುತ್ತಾರೆ. ಅವರು ಬಹುಶಃ 15 ದಿವಸಕ್ಕೆ ಒಮ್ಮೆ ಅಥವಾ ತಿಂಗಳಿಗೆ ಒಮ್ಮೆ ಅಲ್ಲಿ ಸಂತ್ರಸ್ತರ ಮೀಟಿಂಗ್ ಕರೆದರೆ ಒಳ್ಳೆಯದು. ಮಾನ್ಯ ಎಚ್.ಕೆ. ಪಾಟೀಲ್ ಅವರು ಹೋದಾಗ ಕೆಲವು ಪ್ರಾಬ್ಲಮ್‌ಗಳು ಸಾಲ್ವ್ ಆದವು. ನಾವು ಹೋದಾಗ ಅಧಿಕಾರಿಗಳು ಒಂದಿಷ್ಟು ಪ್ರಾಬ್ಲಮ್ ಸಾಲ್ವ್ ಮಾಡಿದರು. ಅಲ್ಲಿ ಯಾರಾದರೂ ಒಬ್ಬರು ಹಿರಿಯರು ಹೋದಾಗ, ಜವಾಬ್ದಾರಿಯುತವಾದಂತಹ ಮಂತ್ರಿಗಳು ಅಥವಾ ಅಧಿಕಾರಿಗಳು ಹೋದಾಗ ಕೆಲವೊಂದು ಸಣ್ಣ ಪುಟ್ಟ ಸಮಸ್ಯೆಗಳು ಬಗೆಹರಿಯುವುದಕ್ಕೆ ಸಾಧ್ಯತೆ ಇದೆ. ಅದಕ್ಕೆ ಆ ದಿಸೆಯಲ್ಲಿ ಜಿಲ್ಲಾ ಮಂತ್ರಿಗಳು 15 ದಿವಸಕ್ಕೊಮ್ಮೆ ಮೀಟಿಂಗ್ ಕರೆದರೆ ಬಹುಶಃ ಕೆಲವು ಸಮಸ್ಯೆಗಳು ಬಗೆಹರಿಯುವುದಕ್ಕೆ ಸಾಧ್ಯತೆ ಇದೆ. ಅದನ್ನು ಮಾಡಲಿ ಎನ್ನುವಂತಹದು ಮತ್ತು "ಬಿ" ಸ್ಕೀಮ್ ಬಗ್ಗೆ ಈಗಾಗಲೇ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಹೇಳಿದ್ದಾರೆ. ನಾನು "ಬಿ" ಸ್ಕೀಮ್ ಇಂಪ್ಲಿಮೆಂಟ್ ಮಾಡುವ ಸಲುವಾಗಿ ಕೃಷ್ಣಾ ಮತ್ತು ಆಲಮಟ್ಟಿ ವಿಚಾರದಲ್ಲಿ ಎಲ್ಲರ ಜೊತೆ ಕುಳಿತು ಚರ್ಚೆ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಎಚ್.ಕೆ. ಪಾಟೀಲ್ ಅವರು ಕ್ಲಾರಿಫಿಕೇಶನ್ ಕೊಟ್ಟಿದ್ದಾರೆ. ಅದರ ಬಗ್ಗೆಯೂ ಚಿಂತನೆ ಆಗಬೇಕಾಗಿದೆ. ಇದು ಒಂದು ಕಡೆ. ಈಗ 15ಕ್ಕೆ ನಿಲ್ಲಿಸಿದ್ದೀರಿ. ಇದರಲ್ಲಿ ಎರಡು ಸಮಸ್ಯೆ ಬರುತ್ತದೆ. ಈ ಕಡೆಗೆ ನೀರಾವರಿ ಪ್ರದೇಶ ಅಲ್ಲಿ ಇರುತ್ತದೆ. ಈ ಕಡೆಗೆ ಎಲ್ಲಿಯವರೆಗೆ ಸಂತ್ರಸ್ತರಿಗೆ ಪುನರ್ ವಸತಿ ಸರಿಯಾಗಿ ಆಗುವುದಿಲ್ಲವೋ ಅಲ್ಲಿಯವರೆಗೆ ಆ ಸಮಸ್ಯೆ ನಿಲ್ಲುವುದಿಲ್ಲ. ಏಕೆಂದರೆ ನಮಗೆ ಸುಪ್ರೀಂ ಕೋರ್ಟ್‌ನಿಂದ ಡೈರೆಕ್ಷನ್ ಕೊಟ್ಟಿದ್ದಾರೆ. ನಮಗೆ ಪವರ್ಸ್ ಸಿಕ್ಕಿ ಬಿಟ್ಟಿದೆ. ಆದರೆ ನಾವು ಅಲ್ಲಿಯವರೆಗೆ

ನೀರನ್ನು ಸಂಗ್ರಹ ಮಾಡಲಿಕ್ಕೆ ಆಗದಂತಹ ಪರಿಸ್ಥಿತಿ ಇದೆ. ಏಕೆಂದರೆ ಬಾಗಲಕೋಟೆ ಸಮಸ್ಯೆ ಇದೆ. ಇದರ ಬಗ್ಗೆ ತಕ್ಷಣ ಸಮರೋಪಾದಿಯಲ್ಲಿ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಈ ಪುನರ್ ವಸತಿ ಬಗ್ಗೆ ಸರ್ಕಾರ ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಂಡರೆ ಮುಂದೆ ಕೃಷ್ಣಾ ಅಲಮಟ್ಟಿಯಲ್ಲಿ ನಮಗೆ ನೀರು ಸಂಗ್ರಹ ಮಾಡುವುದಕ್ಕೆ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಈ ಪುನರ್ ವಸತಿ ಸಮಸ್ಯೆ ಹಾಗೆಯೇ ಇದ್ದರೆ ಆ ನೀರು ಸಂಗ್ರಹ ಮಾಡುವಂತಹ ಸಮಸ್ಯೆ ಹಾಗೆಯೇ ಉಳಿಯುತ್ತದೆ. ಒಂದಕ್ಕೊಂದು ಟ್ಯಾಗ್ ಇದೆ. ಅದಕ್ಕಾಗಿ ಈ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : 516 ಮೀಟರ್ ನೀರು ನಿಲುಗಡೆಯಿಂದ ಇವತ್ತಿನ ಬಿಜಾಪುರ ತಾಲ್ಲೂಕಿನಲ್ಲಿ 22 ಹಳ್ಳಿಗಳು ಮುಳುಗುತ್ತವೆ ಮತ್ತು ಈಗಾಗಲೇ ಮುಳುಗಿದ್ದಾವೆ. ಅವುಗಳ ರೀಹ್ಯಾ ಬಿಲಿಟೇಷನ್ ವರ್ಕ್ ನಡೆದಿದೆ. ಅದರಲ್ಲಿ ಎರಡು ವಿಲೇಜ್‌ಗಳನ್ನು ಬಿಜಾಪುರ ಸಿಟಿಗೆ ಶಿಫ್ಟ್ ಮಾಡಿದ್ದಾರೆ. ಜೈನಾಪುರ್ ಮತ್ತು ಕಣಗೂರ್ ವಿಲೇಜ್‌ಗಳನ್ನು ಬಿಜಾಪುರಕ್ಕೆ ವರ್ಗಾಯಿಸಿದ್ದಾರೆ. ಸುಮಾರಾಗಿ 170 ಎಕರೆಗಳನ್ನು ಈಗಾಗಲೇ ಅಕ್ವಿಸಿಷನ್ ಮಾಡಿದ್ದಾರೆ. ಇಲ್ಲಿ ಇನ್‌ಪ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡುವಾಗ ಏನು ತಪ್ಪು ಮಾಡಿದ್ದಾರೆ ಎಂದರೆ ರೂರಲ್ ಇನ್‌ಪ್ರಾಸ್ಟ್ರಕ್ಚರ್ ಹೇಗಿರುತ್ತದೆ ಆ ತರಹ ಡೆವಲಪ್ ಮಾಡಿ ಬಿಟ್ಟಿದ್ದಾರೆ. ಅದನ್ನು ಅರ್ಬನ್ ಅಥಾರಿಟಿಯವರು ಹೇಗೆ ಒಪ್ಪಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಏಕೆಂದರೆ ಅದರಲ್ಲಿ ಪೂರ್ಣವಾಗಿ ವಾಟರ್ ಸಪ್ಲೈ ಸಿಸ್ಟಂ ಇಲ್ಲ. ಡ್ರೈನೇಜ್ ಸಿಸ್ಟಂ ಇಲ್ಲ. ಮತ್ತು ಅಪ್ರೋಚ್ ರೋಡ್ಸ್ ಸಹ ಇಲ್ಲ. ಅದರ ಬಗ್ಗೆ ಸ್ವಲ್ಪ ದಯಮಾಡಿ ಮಾನ್ಯ ಚಿಮ್ಮನಕಟ್ಟಿಯವರೂ ಸಹಿತ ಆಸಕ್ತಿ ವಹಿಸಬೇಕು. ಏಕೆಂದರೆ ಅದು ಸಿಟಿಯಲ್ಲಿ ಬರುತ್ತದೆ. ಯಾವ ವಿಲೇಜ್‌ನಲ್ಲಿ ಕೂಡ ರೀಹ್ಯಾಬಿಲಿಟೇಷನ್ ಸೆಂಟರ್ಸ್ ಸಿಟಿಯಲ್ಲಿ ಬಂದಿಲ್ಲ. ದಯಮಾಡಿ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಲಾರದೆ ಆ ರೀಹ್ಯಾಬಿಲಿಟೇಷನ್ ವಿಲೇಜಸ್‌ನ್ನು ತಾವು ತಂದು ಸಿಟಿಗೆ ಶಿಫ್ಟ್ ಮಾಡಿದರೆ ನಾಳೆ ಆಗುವಂತಹ ಪರಿಸ್ಥಿತಿ ಬಗ್ಗೆ ಏನಾದರೂ ಪ್ರೀಪ್ಲಾನ್ ಮಾಡಿ, ಅದಕ್ಕೆ ಇನ್‌ಪ್ರಾಸ್ಟ್ರಕ್ಚರ್ಸ್, ರೋಡ್ಸ್, ಸ್ಟ್ರೀಟ್ ಲೈಟ್ಸ್, ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಂಸ್ ಮಾಡಿಸಬೇಕು. ಅದಕ್ಕೆ ಅಡಿಷನಲ್, ಫಂಡ್ಸ್ ಏನಾದರೂ ರೀಲಿಸ್ ಮಾಡಿಸಿ ನಿಮ್ಮ ಜಾಮ್‌ದಾರ್ ಕಡೆಯಿಂದ ಒಂದು ಸ್ಪೆಷಲ್ ಅರೇಂಜ್‌ಮೆಂಟ್ಸ್ ಮಾಡಿಸಿ ಅದನ್ನು ಕೈಗೆತ್ತಿಕೊಳ್ಳಬೇಕೆಂದು ಒಂದು ನನ್ನ ಮನವಿ. ಎರಡನೆಯದು, ಇನ್ನೊಂದು ವಿಚಾರ ನಿಮಗೆ ಗೊತ್ತಿದೆ. ಈ 22 ವಿಲೇಜಸ್ ಸಬ್ ಮರ್ಜ್ ಆಗುವುದರಿಂದ ಕರೆಂಟ್ ಸಮಸ್ಯೆ ಕೂಡ ಇರುವುದಿಲ್ಲ. ನಿಮಗೆ ಹೇಳಬೇಕಾದರೆ ಈ 22 ವಿಲೇಜಸ್‌ಗೆ ಆಗಲೇ ಬಾಗಲಕೋಟೆ ಜಿಲ್ಲೆಯಿಂದ ಕರೆಂಟ್ ಸಪ್ಲೈ ಆಗುತ್ತಿತ್ತು. ಆ ಕಡೆ ಸಬ್ ಸ್ಟೇಷನ್ ಇತ್ತು. ಈಗ ಸಬ್‌ಸ್ಟೇಷನ್ ಪೂರ್ಣವಾಗಿ ಮುಳುಗಿ ಹೋಗಿದ್ದಾವೆ. ಅದಕ್ಕೆ ಫಾಸ್ಟ್ ಟ್ರ್ಯಾಕ್ ಸಿಸ್ಟಂನಲ್ಲಿ 110 ಕೆವಿ ಸ್ಟೇಷನ್ ಹಾಕುವ ಬಗ್ಗೆ ವಿಚಾರ ಮಾಡಿ. ಮಾನ್ಯ ಬಾಗೇವಾಡಿ ಶಾಸಕರಿಗೆ ಇದು ಗೊತ್ತಿದೆ. ಮಮದಾಪುರ್ ಸ್ಟೇಷನ್ ಅನ್ನು ಎಮರ್ಜೆನ್ಸಿಯಾಗಿ ಫಾಸ್ಟ್ ಟ್ರ್ಯಾಕ್ ಸಿಸ್ಟಂ ಮೇಲೆ ತೆಗೆದುಕೊಳ್ಳುತ್ತೇವೆಂದು ಕೆಇಬಿಯವರು ಪ್ರಾಮಿಸ್ ಮಾಡಿದ್ದರು. ಇನ್ನೂವರೆಗೆ ಕೂಡ ಅದರ ಕೆಲಸ ಸ್ಟಾರ್ಟ್ ಆಗಿಲ್ಲ. ಜೂನ್ ಅಂತ್ಯದವರೆಗೆ ಆ 110 ಕೆವಿ ಸ್ಟೇಷನ್ ಕೆಲಸ ಮುಗಿಯಬೇಕು. ಮುಗಿಯದಿದ್ದರೆ ಅದರ ಸಂಪೂರ್ಣ

ಲೋಡ್ ಬಿಜಾಪುರ ತಾಲ್ಲೂಕಿನ ಮೇಲೆ ಬೀಳುತ್ತದೆ. ದಯಮಾಡಿ ಈ ಎರಡು ವಿಷಯಗಳ ಬಗ್ಗೆ ಸಚಿವರು ಕ್ಲಾರಿಫೈ ಮಾಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮತ್ತೆ ಈ ಮಂದಾಪುರ ಸ್ಟೇಷನ್ ಅನ್ನು ಎಮರ್ಜೆನ್ಸಿಯಾಗಿ ಕಂಟ್ರಾಕ್ಟ್ ಸಿಸ್ಟಂನಲ್ಲಿ ಕೆಇಬಿಯವರು ತೆಗೆದುಕೊಳ್ಳುತ್ತೇವೆಂದು ಪ್ರಾಮಿಸ್ ಮಾಡಿದ್ದರೂ ಸಹ ಇದುವರೆವಿಗೂ ಅದರ ಕೆಲಸ ಪ್ರಾರಂಭವಾಗಲಿಲ್ಲ. 110 ಕೆ.ವಿ. ಸ್ಟೇಷನ್ ಕೆಲಸ ಜೂನ್ ಅಂತ್ಯದೊಳಗಾದರೂ ಮುಗಿಯಬೇಕು. ಮುಗಿಯದಿದ್ದರೆ ಇದರ ಸಂಪೂರ್ಣ ಲೋಡ್ ಬಿಜಾಪುರ ತಾಲ್ಲೂಕಿನ ಮೇಲೆಯೇ ಬೀಳುತ್ತದಾದ್ದರಿಂದ, ಇವೆರಡು ವಿಷಯಗಳಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ನೀಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಸನ್ಮಾನ್ಯ ಅಧ್ಯಕ್ಷರೇ, ಕೃಷ್ಣಾ ಯೋಜನೆಯನ್ನು ಕ್ರಿ.ಶ. 2003ನೇ ಇಸವಿಯೊಳಗೆ ಏನು ಮುಗಿಸಬೇಕಾಗಿತ್ತು, ಇದನ್ನು ಕ್ರಿ.ಶ. 2002ನೇ ಇಸವಿಯೊಳಗಾಗಿಯೇ ಮುಗಿಸುತ್ತೇವೆಂದು ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಹೇಳಿರುವುದನ್ನು ನಾನು ನಿಜವಾಗಿಯೂ ಕೂಡ ಸ್ವಾಗತಿಸುತ್ತೇನೆ. ಕೃಷ್ಣಾ ಯೋಜನೆ ಎಂದರೆ, ಕೃಷ್ಣಾ ಕಣಿವೆಯಲ್ಲಿ ಬರುವ ಎಲ್ಲಾ ಯೋಜನೆಯೇನಿದೆ, ಅದೆಲ್ಲವನ್ನೂ ಮುಗಿಸುತ್ತೀರೋ ಅಥವಾ ಕೃಷ್ಣಾ ಯೋಜನೆಯೊಂದನ್ನೇ ಮುಗಿಸುತ್ತೀರೋ ಎಂಬುದರ ಬಗ್ಗೆ ಸ್ಪಷ್ಟಪಡಿಸಬೇಕು. ಇನ್ನೊಂದು ಮಹತ್ವದ ಪ್ರಶ್ನೆಯೇನಂದರೆ, ಈಗಾಗಲೇ ತಮ್ಮ ಜಮೀನು ಕಳೆದುಕೊಂಡಂಥ ರೈತರ ಮಕ್ಕಳಿಗೆ ಸರ್ಕಾರಿ ಉದ್ಯೋಗ ಕೊಡಲಾಗುವುದೆಂಬ ಸುದ್ದಿ ಮೊದಲಿನಿಂದಲೂ ಇದೆ. ಈ ಕುರಿತು ಸರ್ಕಾರದಿಂದ ಒಂದು ಆದೇಶವಾಗಿತ್ತೆಂದು ನನಗನ್ನಿಸುತ್ತದೆ. ಅದನ್ನೂ ಪಕ್ಕಾ ಆಗಲಿಲ್ಲವೆಂದು ಕಾಣುತ್ತದಾದ್ದರಿಂದ, ಸರ್ಕಾರದ ಆದೇಶವನ್ನು ತೀವ್ರಗತಿಯಲ್ಲಿ ಜಾರಿಗೆ ತರಲು ಕ್ರಮ ಕೈಗೊಳ್ಳಬೇಕು. ಜಮೀನು ಕಳೆದುಕೊಂಡಿರುವ ರೈತರ ಮಕ್ಕಳಲ್ಲಿ ಕೆಲವರು ಈಗಾಗಲೇ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೂ ಆ ಸಂಸ್ಥೆಗೆ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಅನುದಾನ ಬಿಡುಗಡೆ ಮಾಡಿದರೆ ಅವರಿಗೆ ತುಂಬಾ ಅನುಕೂಲವಾಗುತ್ತದಾದ್ದರಿಂದ, ಮಾನ್ಯ ಮಂತ್ರಿಗಳು ಈ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಆದುದರಿಂದ, ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿರುವುದೇನೆಂದರೆ, ಕೃಷ್ಣಾ ಕಣಿವೆಯಲ್ಲಿ ಬರುವ ಎಲ್ಲಾ ಯೋಜನೆಗಳನ್ನೂ ಕೂಡ ಕ್ರಿ.ಶ. 2002 ಇಸವಿಯೊಳಗೆ ಮುಗಿಸುತ್ತೀರಾ? ಈ ಪೈಕಿ ಹುಲಿಗುಡ್ಡ ಎಂಬಲ್ಲಿ ಕೈಗೆತ್ತಿಕೊಂಡಿರುವ ಕೆಲಸ ಮಂದಗತಿಯಲ್ಲಿ ಸಾಗಿದೆ, ಇಲ್ಲವೇ ಕೆಲಸ ನಿಂತುಹೋಗಿದೆ. ಇದಕ್ಕೆ ಕಾರಣ ಹಣ ಬಿಡುಗಡೆಯಾಗದಿರುವುದು. ಸರ್ಕಾರ ಈ ನಿಟ್ಟಿನಲ್ಲಿ ಯಾವ ರೀತಿಯ ಯೋಜನೆ ಮಾಡುತ್ತಿದೆ ಎಂಬುದನ್ನು ದಯವಿಟ್ಟು ಹೇಳಬೇಕು.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳದೆ ಮಾನ್ಯ ಮಂತ್ರಿಗಳಲ್ಲಿ ಮೂರು ವಿಚಾರಗಳನ್ನಷ್ಟೆ ಪ್ರಸ್ತಾಪಿಸುತ್ತಿದ್ದೇನೆ. ಬಹಳ ಪ್ರಮುಖವಾಗಿರುವ ಸ್ಕೀಮ್ 'ಬಿ' ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ತಂತ್ರಜ್ಞರಾದ ಶ್ರೀ ಅಂಗಡಿಯವರ ಅಧ್ಯಕ್ಷತೆಯಲ್ಲೊಂದು ಸಮಿತಿ ರಚಿಸಿ ಒಳ್ಳೆಯ ಕೆಲಸ ಮಾಡಿರುವುದರಿಂದ ಇದಕ್ಕಾಗಿ ನಾನು ಸರ್ಕಾರವನ್ನು ಮೆಚ್ಚುತ್ತೇನೆ. ಈ ಸಮಿತಿಯ ವರದಿಯನ್ನು ತಾವು ಆದಷ್ಟು ಬೇಗ ತರಿಸಿಕೊಂಡು ನಮ್ಮೆಲ್ಲರನ್ನೂ ಕರೆಸಿ ಚರ್ಚಿಸುವುದಕ್ಕೆ ಒಂದು ಸಭೆಯನ್ನು ನಿಗದಿಪಡಿಸಬೇಕು. ಇದು ಮೊದಲನೆಯದು.

ಇನ್ನೊಂದು ಆತಂಕದ ವಿಚರವೇನೆಂದರೆ, ಸ್ಕೀಮ್ 'ಬಿ' ಬಗ್ಗೆ ಇವೊತ್ತಲ್ಲ, ನಾಳೆ ತೀರ್ಮಾನಿಸಲೇಬೇಕಾಗುತ್ತದೆ. ಸಮಯ ಇದೆ. ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಆಣೆಕಟ್ಟಿನ ಎತ್ತರವನ್ನು 519.6 ಮೀಟರ್‌ಗಳವರೆಗೆ ಎತ್ತರಿಸುವುದಕ್ಕೆ ಮಾತ್ರ ಸುಪ್ರೀಂ ಕೋರ್ಟಿನಿಂದ ನಮಗೆ ಆದೇಶವಾಗಿರುವುದು. ವಾಸ್ತವವಾಗಿ ಬಾಗಲಕೋಟೆಯಲ್ಲಿ ನೀರು ನಿಂತುಕೊಳ್ಳುವುದು 521 ಮೀಟರ್‌ಗಳವರೆಗೆ. ಆದುದರಿಂದ, 519.6 ಮೀಟರ್‌ಗಳವರೆಗೆ ನೀವು ನೀರು ನಿಲ್ಲಿಸದೇ ಹೋದರೆ ಅಲ್ಲಿನ ಪುನರ್ವಸತಿ ಕಾರ್ಯಗಳನ್ನು ಕೈಗೊಳ್ಳಲು ನಿಮಗೆ ತೊಂದರೆಯಾಗಬಹುದು ಮತ್ತು ಸ್ಕೀಮ್ 'ಬಿ' ಯಲ್ಲಿನ ನೀರನ್ನು ಹಂಚಿಕೆ ಮಾಡುವ ವಿಚಾರದಲ್ಲೂ ನಿಮಗೆ ತೊಂದರೆಯಾಗಬಹುದು. ಅದಕ್ಕೋಸ್ಕರ ತಾವು ಮುಂಜಾಗ್ರತಾ ಕ್ರಮ ವಹಿಸಬೇಕು ಮತ್ತು ಮುಂದಿನ ಎಂಟು ತಿಂಗಳುಗಳಲ್ಲಿ ಸಮರೋಪಾದಿಯಲ್ಲಿ ಕಾರ್ಯ ಕೈಗೆತ್ತಿಕೊಂಡು ಮುಗಿಸುತ್ತೇವೆಂದು ಹೇಳಬೇಕು. ಮಾನ್ಯ ಸದಸ್ಯರಾದ ಪಿ.ಹೆಚ್. ಪೂಜಾರ್‌ರವರು ಮತ್ತು ಇತರ ಸದಸ್ಯರುಗಳು ಮಾತನಾಡುತ್ತಾ ಏನು ಹೇಳಿದ್ದಾರೆ, ಅದಕ್ಕೆ ಪೂರಕವಾಗಿ ಎರಡು ವಿಚಾರಗಳನ್ನು ಕೇಳುತ್ತಿದ್ದೇನೆ. ತಮಗೆ ಗೊತ್ತಿರುವಂತೆ ಈಗಾಗಲೇ ಕೆಲವು ಕಟ್ಟಡಗಳನ್ನು ಸರ್ವೆ ಮಾಡಿ ಒಂದು ದರವನ್ನು ನಿಗದಿಪಡಿಸಿದ್ದರೂ ಕೂಡ ಮತ್ತೆ ವಿನಾಕಾರಣ ರಿ-ಸರ್ವೆ ಮಾಡಿ ದರಗಳನ್ನು ಕಡಿಮೆಗೊಳಿಸುವುದಕ್ಕೆ ಕೆಲವರು ಪ್ರಯತ್ನಿಸುತ್ತಿದ್ದಾರೆ. ಆದುದರಿಂದ, ಈ ಮುಂಚೆ ಸರ್ವೆ ಮಾಡಿ ಸಂಬಂಧಿಸಿದವರಿಗೆ ಅವಾರ್ಡ್ ಕಾಪಿ ಕೊಟ್ಟಿದ್ದು, ಇದರ ಪ್ರಕಾರ ಅವರಿಗೆ ಹಣ ಸಂದಾಯವಾಗಬೇಕು ಮತ್ತು ಸೆಕ್ಷನ್ 16(2)ರ ಪ್ರಕಾರ ಪರಿಹಾರ ಕೊಡುವ ಬಗ್ಗೆ ಭರವಸೆ ಕೊಡಬೇಕು. ಕೊನೆಯದಾಗಿ, ಸ್ಕೀಮ್ 'ಬಿ' ಅನುಷ್ಠಾನಕ್ಕೆ ತೊಂದರೆಯಾಗದಂತೆ 519.6 ಮೀಟರ್‌ಗಳವರೆಗೆ ನೀರನ್ನು ನಿಲ್ಲಿಸುತ್ತೇವೆಂದು ಭರವಸೆ ಕೊಡಬೇಕು.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಹಿರಿಯ ಸದಸ್ಯರಾದ ಪಿ.ಜಿ.ಆರ್. ಸಿಂಧ್ಯರವರು ಹೇಳಿರುವಂತೆ ಸೆಕ್ಷನ್ 16(2)ರ ಪ್ರಕಾರ ನೋಟಿಫಿಕೇಶನ್ ಇಶ್ಯೂ ಮಾಡಬೇಕು. ಸರ್ಕಾರ ಭೂ ಸ್ವಾಧೀನಪಡಿಸಿಕೊಂಡು ಪರಿಹಾರ ವಿತರಿಸುವಾಗ ಪೊಸೆಷನ್ ತೆಗೆದುಕೊಂಡ ಬಗ್ಗೆ ಘೋಷಿಸಬೇಕಲ್ಲ, ಆದುದರಿಂದ ಇದರ ಬಗ್ಗೆ ಪ್ರಕಟಿಸಬೇಕು. ಸೆಕ್ಷನ್ 16(2)ರ ಅಧಿಸೂಚನೆ ಪ್ರಕಟವಾದನಂತರ ನಾವು ಪೊಸೆಷನ್ ತೆಗೆದುಕೊಂಡಿದ್ದೇವೆಂದು ಹೇಳಬೇಕು. ಆದರೆ, ಮಾನ್ಯ ಕಂದಾಯ ಸಚಿವರ ಮುಖಾಂತರ ಇದುವರೆವಿಗೂ ಏನೇನು ಉತ್ತರಗಳನ್ನು ಒದಗಿಸಲಾಗಿದೆ, ಬಾಗಲಕೋಟೆಗೆ ಸಂಬಂಧಿಸಿದಂತೆ ಇದುವರೆವಿಗೂ ಸೆಕ್ಷನ್ 16(2) ಅಧಿಸೂಚನೆಯನ್ನು ಪ್ರಕಟಿಸಿರುವುದಿಲ್ಲ. ಬದಲಾಗಿ ಇವೊತ್ತಿನ ದಿವಸ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆಂದು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಬಾಗಲಕೋಟೆಯಲ್ಲಿ ಯಾವುದೇ ಕಟ್ಟಡಗಳಿಗೆ ಸಂಬಂಧಿಸಿದಂತೆ ಸೆಕ್ಷನ್ 16(2)ರ ಅಧಿಸೂಚನೆ ಹೊರಡಿಸಿರುವುದಿಲ್ಲ. ಪೊಸೆಷನ್ ತೆಗೆದುಕೊಂಡ ನಂತರ ಶೇಕಡ 9 ಇಲ್ಲವೇ 15ರಷ್ಟು ಬಡ್ಡಿ ಕೊಡಬೇಕಾಗುತ್ತದೆಂಬ ಕಾರಣಕ್ಕಾಗಿ ಸರ್ಕಾರ ಅಧಿಸೂಚನೆ ಹೊರಡಿಸಲು ಈ ವಿಚಾರದಲ್ಲಿ ಹಿಂದು-ಮುಂದು ನೋಡುತ್ತಿದೆಯೇ? ಹೇಗೆ? ಸರ್ಕಾರ ಏಕೆ ಈ ರೀತಿ ಮೋಸ ಮಾಡುತ್ತಿದೆಯೆಂದು ಅರ್ಥವಾಗುತ್ತಿಲ್ಲ. ಆದುದರಿಂದ, ಈ ತಕ್ಷಣ ಸರ್ಕಾರ ಸೆಕ್ಷನ್ 16(2)ರ ಪ್ರಕಾರ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇರೆಗೆ ಹಲವಾರು ಮಾನ್ಯ ಸದಸ್ಯರು ಈ ಕುರಿತು ಚರ್ಚೆಯಲ್ಲಿ ಭಾಗವಹಿಸಿ ಸರ್ಕಾರದ ಗಮನಕ್ಕೆ ಕೆಲವು ವಿಚಾರಗಳನ್ನು ತಂದಿದ್ದಾರೆ. ಹಿರಿಯ ಮಾನ್ಯ ಸದಸ್ಯರು ಹೇಳಿರುವ ವಿಚಾರಗಳನ್ನು ತಿಳಿದುಕೊಂಡು ಮತ್ತೆ ಈ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ನನಗೆ ಅನುಕೂಲವಾಯಿತು. ಇದಕ್ಕೆ ತರಕಾರು ಮಾಡಿಲ್ಲ. ಮೊದಲನೆಯದಾಗಿ, ಮಾನ್ಯ ಸದಸ್ಯರಾದ ಸಿಂಧ್ಯರವರು ಹೇಳಿರುವ ಮೂರು ವಿಚಾರಗಳಿಗೆ ಸ್ಪಂದಿಸಿ ನಾನು ಹೇಳುವುದಾದರೆ, ಈಗಾಗಲೇ ಸೆಕ್ಷನ್ 16(2)ಕ್ಕೆ ಅಧಿಸೂಚನೆ ಹೊರಡಿಸುವ ಬಗ್ಗೆ ಸರ್ಕಾರ ನಿರ್ಣಯ ಕೈಗೊಂಡಿದೆ. ಮಾನ್ಯ ಸದಸ್ಯರಾದ ಪಿ.ಹೆಚ್. ಪೂಜಾರ್‌ರವರು ವಕೀಲರಾಗಿದ್ದು, ಯಾವಾಗ ಸೆಕ್ಷನ್ 16(2)ಕ್ಕೆ ಅಧಿಸೂಚನೆ ಹೊರಡಿಸಲಾಗುತ್ತದೆಂಬುದು ತಮಗೆ ಗೊತ್ತಿದೆ.

ಶ್ರೀ ಪಿ.ಹೆಚ್. ಪೂಜಾರ್ : ತಾವು ಹೇಳಿದ್ದನ್ನು ಒಪ್ಪಿಕೊಂಡಿದ್ದೇನೆ. ಈಗಾಗಲೇ ಬಾಗಲಕೋಟೆಯಿಂದ ಸುಮಾರು 600 ಕುಟುಂಬಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ ಎಂದು ಹೇಳಿದ್ದು ಅವರುಗಳಿಗೆ ಪರಿಹಾರ ಧನವನ್ನೂ ವಿತರಿಸಿದ್ದೀರಿ. ಇದು ಇಷ್ಟಕ್ಕೇ ಮುಗಿಯಲಿಲ್ಲ. ಸೆಕ್ಷನ್ 16(2)ರ ಪ್ರಕಾರ ಅಧಿಸೂಚನೆ ಹೊರಡಿಸದೆ ಆ ಪ್ರದೇಶವನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಂತಾಗುವುದಿಲ್ಲ. You have taken implied possession. ಆದುದರಿಂದ, ಆದಷ್ಟು ಬೇಗ ಸೆಕ್ಷನ್ 16(2)ರ ಪ್ರಕಾರ ಅಧಿಸೂಚನೆ ಹೊರಡಿಸುವ ಮೂಲಕ ಕ್ರಮ ಕೈಗೊಳ್ಳಬೇಕೆಂಬ ವಿಷಯವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಈ ಕುರಿತು ತಮಗೆ ಹೇಳುವುದಾದರೆ, ನಾವು ನೀರು ನಿಲ್ಲಿಸಿದ್ದರಿಂದ 516.2 ಮೀಟರ್‌ಗಳವರೆಗೆ ಆದು ನಿಂತಿರುವುದನ್ನು ನಾವು ನೋಡಿದ್ದೇವಲ್ಲದೆ, ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯ, ಭೈರೇಗೌಡರು ಹಾಗೂ ಇತರ ಸಂಬಂಧಪಟ್ಟ ಸದಸ್ಯರು ಹೋಗಿ ನೋಡಿದ್ದಾರೆ. ನಾವು ನೀರು ನಿಲ್ಲಿಸಿದ್ದರಿಂದ ಒಂದು ಇಂಚಿನಷ್ಟು ನೀರು ಯಾವುದಾದರೂ ಆಸ್ತಿ-ಪಾಸ್ತಿಗಳಿಗೆ ನುಗ್ಗಿದ್ದರೆ, ಮತ್ತು ಆ ಪ್ರದೇಶಕ್ಕೆ ಸಂಬಂಧಿಸಿದಂತೆ ಸೆಕ್ಷನ್ 16(2)ಕ್ಕೆ ಅಧಿಸೂಚನೆ ಹೊರಡಿಸಿಲ್ಲವೆಂಬ ಅಂಶವನ್ನು ನೀವು ನನ್ನ ಗಮನಕ್ಕೆ ತಂದರೆ ನಾನು 48 ಗಂಟೆಯೊಳಗೆ ಅಧಿಸೂಚನೆ ಹೊರಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ. ಎರಡನೆಯದಾಗಿ, ಇದನ್ನು ಹೊರತುಪಡಿಸಿ, ಕೆಲವು ಪ್ರದೇಶಗಳಲ್ಲಿ 16(2) ಅಧಿಸೂಚನೆ ಹೊರಡಿಸುವ ಬಗ್ಗೆ ಮಾನ್ಯ ಸದಸ್ಯರಾದ ಜೆ.ಡಿ. ಪಾಟೀಲರು ನಿಮ್ಮೊಂದಿಗೆ ಸೇರಿಕೊಂಡು ಅಧಿಸೂಚನೆ ಹೊರಡಿಸಬೇಕೆಂದು ತಕರಾರು ಮಾಡುತ್ತಿದ್ದರಲ್ಲ ಮತ್ತು ಅವರು ಸನ್ಮಾನ್ಯ ಮುಖ್ಯಮಂತ್ರಿಗಳ ಮತ್ತು ಕಂದಾಯ ಸಚಿವರ ಗಮನಕ್ಕೆ ಏನು ತಂದಿದ್ದರು, ಅಲ್ಲಿಯೂ ಸಹ ಕೆಲವು ಆಸ್ತಿಗಳ ಬಗ್ಗೆ 16(2) ಅಧಿಸೂಚನೆ ಹೊರಡಿಸುವುದಕ್ಕೆ ಈಗಾಗಲೇ ಪ್ರೊಸೆಸ್ ಅನ್ನು ಪ್ರಾರಂಭಿಸಿದ್ದೇವೆ.

ಶ್ರೀ ಜೆ.ಡಿ. ಪಾಟೀಲ್ : ಈ ಕುರಿತು ತಾವು ಅಧಿಕಾರಿಗಳಿಗೆ ಆದೇಶಿಸಿದ್ದರೂ ಅವರು ಅನುಷ್ಠಾನಗೊಳಿಸುತ್ತಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಸರ್ಕಾರದ ಮಟ್ಟದಲ್ಲಿ ಈ ಕುರಿತು ಆದೇಶವಾಗಿ ಹದಿನೈದು ದಿವಸಗಳಾಗಿದ್ದರೂ ಅದನ್ನು ಅನುಷ್ಠಾನಗೊಳಿಸದ ಸಂಬಂಧಪಟ್ಟ ಅಧಿಕಾರಿಗಳಿಂದ ನಾವು ವಿವರಣೆ ಪಡೆಯತ್ತೇವೆ. ಬಾಗಲಕೋಟೆಗೆ ಸಂಬಂಧಿಸಿದಂತೆ ಒಂದು ವಿಚಾರ ಹೇಳುವುದಾದರೆ, ನೀರು ಎರಡು ಇಂಚಿನಷ್ಟು ನುಗ್ಗಿದರೂ ಸಾಕು, ಅಲ್ಲಿನ ಪ್ರದೇಶವನ್ನು ವಶಕ್ಕೆ ತೆಗೆದುಕೊಂಡು 16(2) ಅಧಿಸೂಚನೆ ಹೊರಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ. ಎರಡನೆಯದಾಗಿ, ರಿ-ಸರ್ವೆ ವಿಚಾರದಲ್ಲಿ ಮಾನ್ಯ ಸದಸ್ಯರಾದ ಸಿಂಧ್ಯ ಮತ್ತು ಪೂಜಾರ್‌ರವರು ಪ್ರಸ್ತಾಪಿಸಿರುವಂತೆ ಎನ್.ಜಿ.ಓ. ವತಿಯಿಂದ ರಿ-ಸರ್ವೆ ಕಾರ್ಯ ಆಗಬೇಕೆಂದಿತ್ತು. It is very huge work. ಇದುವರೆವಿಗೂ ಯಾವುದೇ ಸರ್ಕಾರಗಳು ಆಡಳಿತ ನಡೆಸಿದ್ದರೂ ಕೂಡ ಸುಮಾರು ದಿವಸಗಳಿಂದ ಈ ಸರ್ವೆ ಕಾರ್ಯ ನಡೆದಿರುವುದು ತಮಗೆ ಗೊತ್ತಿದೆ. ತಮ್ಮ ಗಮನಕ್ಕೆ ತರುವುದಾದರೆ, ನಾರಾಯಣಪುರದಲ್ಲಿ ಬಹಳಷ್ಟು ಫಾಲ್ಟಿ ಸರ್ವೆ ನಡೆದಿತ್ತು. ಅಲ್ಲಿ ರೀ-ಹ್ಯಾಬಿಲಿಟೇಷನ್ ಸೆಂಟರ್ ಎಂದು ಏನು ಮಾಡಿದೆವು, ಅದು ನೀರಿನಲ್ಲಿ ಅರ್ಧ ಮುಳುಗಿಹೋಗುವಂಥ ಪರಿಸ್ಥಿತಿಗೆ ಬಂದಿದೆ. ರೀ-ಹ್ಯಾಬಿಲಿಟೇಷನ್ ಸೆಂಟರ್‌ನಲ್ಲಿ ನೀರು ಅರ್ಧಕ್ಕೆ ಬಂದು ನಿಂತಿರುವುದನ್ನು ಇವೊತ್ತು ಕಾಣುತ್ತಿದ್ದೇವೆ. ಸತತವಾಗಿ ಸರ್ವೆ, ರಿ-ಸರ್ವೆ, ವೆರಿಫಿಕೇಷನ್ ಮುಂತಾದ ಕಾರ್ಯಗಳು ನಡೆದುಕೊಂಡು ಬಂದಿರುವುದರಿಂದ ಮತ್ತೆ ರಿ-ಸರ್ವೆಗೋಸ್ಕರ ಮತ್ತೊಂದು ಏಜೆನ್ಸಿಗೆ ವಹಿಸುವ ಮೂಲಕ ಪುನಃ ಈ ದಿಸೆಯಲ್ಲಿ ವಿಳಂಬವಾಗಬಾರದೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈಗ ಯಾರೂ ಕೂಡ ಆತಂಕಪಡಬೇಕಾಗಿಲ್ಲ. ಯಾರ ಮನೆಗಳು ನೀರಿನಲ್ಲಿ ಮುಳುಗುತ್ತವೆ ಮತ್ತು ಯಾರ ಮನೆಯೊಳಗೆ ನೀರು ಎಲ್ಲಿಯವರೆಗೆ ಬರುತ್ತದೆ ಎಂಬುದನ್ನು ಬಾಗಲಕೋಟೆಯಲ್ಲಿ ಕೆಂಪು ಬಣ್ಣದಿಂದ ಮನೆಗಳನ್ನು ಗುರ್ತಿಸಿದ್ದೇವೆ. ಜಗದೀಶ್ ಶೆಟ್ಟರ್‌ರವರೆ, ತಾವು ಬಾಗಲಕೋಟೆಯಲ್ಲಿ ನೋಡಿರಬಹುದು, ನೀರಿನಲ್ಲಿ ಮನೆ ಮುಳುಗುತ್ತಿದ್ದರೆ, ಆ ಮನೆಯನ್ನು ಕೆಂಪು ಬಣ್ಣದಿಂದ ಗುರ್ತಿಸಿದ್ದೇವೆ. that it is going to submerge ಎಂದು ಒಂದು ವೇಳೆ ಆ ರೀತಿ ಕೆಂಪು ಬಣ್ಣದಿಂದ ಗುರ್ತಿಸದ ಮನೆಗಳೇನಾದರೂ ನೀರಿನಲ್ಲಿ ಮುಳುಗಿದರೆ ತಕ್ಷಣ ನಾವುಗಳೆಲ್ಲರೂ ಎಚ್ಚೆತ್ತು ಕೊಳ್ಳಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಬಾಗಲಕೋಟೆಯಲ್ಲಿ ಮನೆ ನೀರಿನಲ್ಲಿ ಮುಳುಗುತ್ತಿದ್ದರೆ ಆ ಮನೆಗೆ ಕೆಂಪು ಬಣ್ಣದಿಂದ ಗುರ್ತಿಸಿದ್ದೀರಿ, ಆದರೆ, ಅದರ ಪಕ್ಕದಲ್ಲಿರುವ ಮನೆ ನೀರಿನಲ್ಲಿ ಮುಳುಗುತ್ತಿದ್ದರೆ ಅದನ್ನು ಕೆಂಪು ಬಣ್ಣದಿಂದ ಗುರ್ತಿಸಿರುವುದಿಲ್ಲ. ಒಂದು ಮನೆಗೆ ಮಾರ್ಕ್ ಮಾಡಿದ್ದೀರಿ, ಆದರೆ ಆ ಮನೆಯ ಪಕ್ಕದಲ್ಲೇ ಇರುವ ಮತ್ತೊಂದು ಮನೆಗೆ ಮಾರ್ಕ್ ಮಾಡಿಲ್ಲ.

ಶ್ರೀ ಪಿ.ಹೆಚ್. ಪೂಜಾರ್ : ಪಕ್ಕದಲ್ಲಿರುವ ಮನೆಯನ್ನು ಮುಳುಗಡೆಯೆಂದು ತೋರಿಸಿದ್ದೀರಿ, ಆದರೆ ನನ್ನ ಮನೆಯನ್ನು ಮುಳುಗಡೆಯೆಂದು ತೋರಿಸಿಲ್ಲ. ಈ ದೃಷ್ಟಿಯಿಂದ ಈ ಕೆಲಸ ಎನ್.ಜಿ.ಓ. ದಿಂದ ಆಗಲಿ.

ಶ್ರೀ ಹೆಚ್. ಕೆ. ಪಾಟೀಲ್ : ಮಾನ್ಯ ಸದಸ್ಯರೆ, ಇಷ್ಟು ದೊಡ್ಡ ಯೋಜನೆಯಲ್ಲಿ ಇದು ಒಂದು ಸಣ್ಣ ವಿಚಾರ. ಬಾಗಲಕೋಟೆ ಪುನರ್ವಸತಿ ಸಚಿವರು ಇಲ್ಲೇ ಇದ್ದಾರೆ, ಪುನರ್ವಸತಿ ಪಟ್ಟಿಯಲ್ಲಿ ಇಂಥವರ ಹೆಸರು ಬಿಟ್ಟು ಹೋಗಿಯೆಂದು ಪಟ್ಟಿ ಮಾಡಿಕೊಡಿ ಆ ಪಟ್ಟಿಯನ್ನು ನಾನೂ, ಕಂದಾಯ ಸಚಿವರಿಬ್ಬರೂ ಒಪ್ಪಿಕೊಳ್ಳುತ್ತೇವೆ.

ಶ್ರೀ ಸಿ. ಭೈರೇಗೌಡ : ಆ ರೀತಿ ಪಟ್ಟಿ ಬೇಕಾಗಿಲ್ಲ. ಏಕೆಂದರೆ ಅಲ್ಲಿ ಈಗಾಗಲೇ ನೀರು ಬಂದುಬಿಟ್ಟಿದೆ. ತಮಗೇ ಅದು ಗೊತ್ತಾಗುತ್ತದೆ.

ಶ್ರೀ ಹೆಚ್. ಕೆ. ಪಾಟೀಲ್ : ನಾವು ಈಗಾಗಲೇ ಕೆಂಪು ಮಾರ್ಕ್ ಮಾಡಿದ್ದೇವೆ. ಅಂದರೆ ನಾವು ಎಲ್ಲಿಯವರೆಗೆ ಸರ್ವೆ ಮಾಡಿ ಪರಿಹಾರವನ್ನು ಕೊಟ್ಟಿದ್ದವೋ, ಯಾವ್ಯಾವುದು ಮುಳುಗುತ್ತಿದೋ ಅವೆಲ್ಲವುಗಳಿಗೆ ನಾವು ಮಾರ್ಕ್ ಮಾಡಿದ್ದೇವೆ. ಇನ್ನು ಸ್ಕೀಮ್ 'ಬಿ' ಬಗ್ಗೆ ಮಾನ್ಯ ಸಿಂಧ್ಯರವರು ಹೇಳಿದಂತೆ ಆ ತಜ್ಞರ ವರದಿ ಸಂಪೂರ್ಣವಾಗಿ ಸಿದ್ಧವಾದಮೇಲೆ ಎಲ್ಲಾ ರಾಜಕೀಯ ಪಕ್ಷಗಳ ನಾಯಕರೊಂದಿಗೆ ಚರ್ಚೆ ಮಾಡುತ್ತೇವೆ. ಆ ಚರ್ಚೆಯಲ್ಲಿ ತಾವು ಹೇಗೆ ಮಾಡಬೇಕೆಂದು ಸಲಹೆ ನೀಡುತ್ತೀರಿ ಅದರಂತೆ ನಾವು ಕ್ರಮತೆಗೆದುಕೊಳ್ಳುತ್ತೇವೆ. ಮಾನ್ಯ ಪೂಜಾರ್‌ರವರು ಹಲವಾರು ವಿಚಾರಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರು. ಬಾಡಿಗೆದಾರರು ಯಾರು ಇದ್ದಾರೆ ಅವರ ಬಗ್ಗೆ ತಾವು ಕಳಕಳಿಯನ್ನು ವ್ಯಕ್ತ ಮಾಡಿದ್ದೀರಿ. ಮುಳುಗಡೆಯಾಗಿರುವ ಪ್ರದೇಶದಲ್ಲಿ ಇದ್ದವರಿಗೆ ನೀವು ಬಾಡಿಗೆ ಇದ್ದಿರಿ ಎಂದು ಕಳಿಸಲಿಲ್ಲವೆಂಬುದು ತಮಗೂ ಗೊತ್ತಿದೆ. ಅವರಿಗೂ ಪರಿಹಾರ ಕೊಟ್ಟಿದ್ದೇವೆ. ಬಡವರು ಅನಧಿಕೃತವಾಗಿ ಗುಡಿಸಲುಗಳನ್ನು, ಜೋಪಡಿಗಳನ್ನು ಕಟ್ಟಿಕೊಂಡಿದ್ದರು ಅಂಥವರಿಗೂ ಸಹ ಪರಿಹಾರವನ್ನು ಕೊಡಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ. ಆಶ್ರಯ ಯೋಜನೆಯಲ್ಲಿ ಅವರಿಗೆ ಮನೆಯನ್ನು ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ. ತಾವು ಬಿ.ಟಿ.ಡಿ.ಎ. ಮಾಡುವ ಬಗ್ಗೆ ಸಲಹೆ ಮಾಡಿದ್ದೀರಿ, ಅದನ್ನು ಆದಷ್ಟು ಬೇಗ ಮಾಡುತ್ತೇನೆ. ಇದರ ಜೊತೆಗೆ ಸಂತ್ರಸ್ತ ಕುಟುಂಬದವರಿಗೆ ಉದ್ಯೋಗ ಕೊಡುವ ಬಗ್ಗೆ ಅನೇಕ ಸದಸ್ಯರು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಇವರೆಲ್ಲ ದೇಶಕ್ಕಾಗಿ ತಮ್ಮ ಆಸ್ತಿಯನ್ನು ತ್ಯಾಗ ಮಾಡುತ್ತಾರೆ. ಮತ್ತೊಂದು ಕಡೆ ನೆಲಸಬೇಕಾಗುತ್ತದೆ. ಅವರುಗಳ ಜೀವನ ಸಂಪೂರ್ಣವಾಗಿ ಅಸ್ತವ್ಯಸ್ತವಾಗುತ್ತದೆ. ಒಂದು ಜನರೇಷನ್‌ನವರು ಬಹಳ ತೊಂದರೆಗೆ ಒಳಗಾಗುತ್ತಾರೆ, ಅವರು ಪುನರ್ವಸತಿಗೊಳ್ಳಲು ಸಾಧ್ಯವಾಗುವುದಿಲ್ಲವೆಂಬ ದೃಷ್ಟಿಯಿಂದ ಅವರ ಕುಟುಂಬದ ಒಬ್ಬರಿಗೆ ಸರ್ಕಾರಿ ಉದ್ಯೋಗ ಕೊಡಬೇಕೆಂಬ ಯೋಚನೆ ಬಹಳ ದಿವಸಗಳಿಂದ ಇತ್ತು. ಅದರ ಬಗ್ಗೆ ಸಾಕಷ್ಟು ಹೋರಾಟಗಳು ಆಗುತ್ತಿತ್ತು. ತಾವೂ ಮಾಡುತ್ತಿದ್ದೀರಿ, ಬಾಗಲಕೋಟೆ ಸಂತ್ರಸ್ತರ ಹೋರಾಟ ಸಮಿತಿಯವರೂ ಸಹ ಹೋರಾಟ ಮಾಡುತ್ತಿದ್ದರು, ಇದನ್ನೆಲ್ಲಾ ಗಮನಿಸಿ ತಮ್ಮ ಬೇಡಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಇದಕ್ಕೆ ಸ್ಪಂದಿಸಿ ಈಗಾಗಲೇ ಜುಲೈ 22 ರಂದು ಸ್ಪಾಫ್ ನೋಟಿಫಿಕೇಷನನ್ನು ಸಂತ್ರಸ್ತರ ಮಕ್ಕಳ ಸಲುವಾಗಿ ಪ್ರಕಟಣೆ ಮಾಡಿದ್ದೆವು. ಪ್ರಾಜೆಕ್ಟ್ ಡಿಸ್‌ಪ್ಲೇಸ್ಡ್ ಫ್ಯಾಮಿಲೀಸ್‌ರ ಸಲುವಾಗಿ ಸರ್ಕಾರದ ಉದ್ಯೋಗದಲ್ಲಿ ಐದು ಪರ್ಸೆಂಟ್ ಮೀಸಲಾತಿಯನ್ನು ಕೊಡಬೇಕೆಂದು ಡ್ರಾಫ್ಟ್ ನೋಟಿಫಿಕೇಷನ್ ಆಗಿ ಕ್ಯಾಬಿನೇಟ್‌ನಲ್ಲಿ ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಪ್ರಾಜೆಕ್ಟ್ ಡಿಸ್‌ಪ್ಲೇಸ್ಡ್ ಪರ್‌ಸನ್ಸ್ ಯಾರು ಎಂದು ಕ್ಲಾರಿಫೈ ಮಾಡಿದ್ದೇವೆ. ಈ ಸಂತ್ರಸ್ತ ಕುಟುಂಬಗಳೇನಿದೆ ಅದರ ವ್ಯಕ್ತಿಗಳಿಗೆ ಸರ್ಕಾರದ 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳಲ್ಲಿ ಶೇಕಡ ಐದರಷ್ಟು ಹುದ್ದೆಗಳನ್ನು ಹಾರಿಜಾಂಟಲ್ ಆಗಿ ಮೀಸಲಾತಿಯನ್ನು ಕೊಡಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಇದನ್ನು ಜಾರಿಗೆ ತರಲು ಕ್ರಮ ತೆಗೆದುಕೊಂಡಿದ್ದೇವೆ. ಯಾವ ದಿನಾಂಕದಿಂದ ಇವರು ತಮ್ಮ ಆಸ್ತಿಗಳನ್ನು ಕಳೆದುಕೊಳ್ಳುತ್ತಾರೋ ಅಲ್ಲಿಂದ ಇಪ್ಪತ್ತು ವರ್ಷಗಳವರೆಗೆ ಈ ಸೌಲಭ್ಯ ಆಯಾಯ

ಕುಟುಂಬದವರಿಗೆ ಲಭ್ಯವಿರುತ್ತದೆ. ಮಾನ್ಯ ಪೂಜಾರ್‌ರವರು ಶೆಟ್ಟಿ ಆಯೋಗದ ಬಗ್ಗೆ ಪ್ರಸ್ತಾಪ ಮಾಡಿದರು. ಮಲೇರಿಯಾದಿಂದ ಎಷ್ಟು ಹಾನಿಯಾಗಬಹುದು, ಹಿನ್ನೀರಿನಿಂದ ರೈತರಿಗೆ ಎಷ್ಟು ಹಾನಿಯಾಗಬಹುದು, ನೀರು ಎಲ್ಲಿಯವರೆಗೆ ನಿಂತರೆ ಎಲ್ಲಿಯವರೆಗೆ ಭೂಸ್ವಾಧೀನ ಮಾಡಿಕೊಳ್ಳಬೇಕು ಮುಂತಾದ ಸಮಸ್ಯೆಗಳೇನಿದ್ದವು ಅದನ್ನು ನೋಡಲು ನಾವು ಈಗಾಗಲೇ ಶೆಟ್ಟಿ ಸಮಿತಿಯನ್ನು ನೇಮಕ ಮಾಡಿದ್ದೆವು. ಶೆಟ್ಟಿ ಸಮಿತಿಯವರು ಓವರ್ ಟೈಮ್ ಕೆಲಸ ಮಾಡಿ ಬಹಳಷ್ಟು ಕೆಲಸವನ್ನು ಈಗಾಗಲೇ ಮಾಡಿದ್ದಾರೆ. ಇನ್ನೇನು ಕೆಲವೇ ವಾರಗಳಲ್ಲಿ ಸಮಿತಿಯ ವರದಿಯನ್ನು ಕೊಡುವುದಾಗಿ ಅವರು ಭರವಸೆ ನೀಡಿದ್ದಾರೆ. ಇವತ್ತು ಬಾಗಲಕೋಟೆಯಲ್ಲಿರುವ ಪರಿಸ್ಥಿತಿಯನ್ನು ನೋಡಲು ಶೆಟ್ಟಿಯವರು ಹೋಗಬೇಕೆಂದು ತಾವು ಹೇಳಿದ್ದೀರಿ. ತಮ್ಮ ಭಾವನೆಗಳನ್ನು ಶೆಟ್ಟಿ ಸಮಿತಿಯವರಿಗೆ ತಿಳಿಸುತ್ತೇನೆ. ವರದಿಯನ್ನು ಪೂರ್ಣಗೊಳಿಸುವ ಮೊದಲು ಬಾಗಲಕೋಟೆಯ ಸ್ಥಳದ ಪರಿಶೀಲನೆಯನ್ನು ಸಹ ಮಾಡಬೇಕೆಂದು ಅವರಿಗೆ ಸೂಚನೆಯನ್ನು ಕೊಡುತ್ತೇನೆ. ನಾವು ಪುನರ್ವಸತಿ ಕೆಲಸವನ್ನು ಮಾಡುವಾಗ ಕೇವಲ ಮನುಷ್ಯರನ್ನು ಮಾತ್ರ ನೋಡಲಿಲ್ಲ. ಟಾಂಗಾ ಇದ್ದವನಿಗೆ 20``x30" ವಿಸ್ತೀರ್ಣವುಳ್ಳ ನಿವೇಶನ ಕೊಟ್ಟರೆ ಅದು ಅವನಿಗೆ ಏತಕ್ಕೂ ಸಾಕಾಗುವುದಿಲ್ಲ. ಅದೇ ರೀತಿ ನೇಕಾರರಿಗೆ 20``x30" ವಿಸ್ತೀರ್ಣವುಳ್ಳ ನಿವೇಶನ ಕೊಟ್ಟರೆ ಏನೂ ಉಪಯೋಗವಾಗುವುದಿಲ್ಲ. ರೈತಾಪಿ ಜನರಿಗೆ ಆ ರೀತಿ ನಿವೇಶನ ಕೊಟ್ಟರೆ ಉಪಯೋಗವಾಗುವುದಿಲ್ಲ. ಬಹುಶಃ ನಮ್ಮ ದೇಶದ ಇತರ ಭಾಗಗಳಲ್ಲೇನು ಪುನರ್ವಸತಿ ಕೆಲಸಗಳಾಗಿದೆಯೋ ಅದನ್ನು ನೋಡಿದರೆ ಎಲ್ಲೂ ಜಾನುವಾರುಗಳನ್ನು ಗಮನದಲ್ಲಿಟ್ಟುಕೊಂಡು ಪುನರ್ವಸತಿ ಕೆಲಸವನ್ನು ಮಾಡಿಲ್ಲ. ಆದರೆ ನಾವು ಪ್ರಪ್ರಥಮವಾಗಿ ಜಾನುವಾರುಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡು ಬಾಗಲಕೋಟೆಯ ಪುನರ್ವಸತಿ ಕೆಲಸವನ್ನು ಮಾಡಿ ಅವರಿಗೆ ಬೇಕಾದಷ್ಟು ಜಾಗವನ್ನು ಒದಗಿಸಿಕೊಟ್ಟಿದ್ದೇವೆ. ಟಾಂಗಾದವರಿಗೆ, ನೇಕಾರರಿಗೆ ಅವರಿಗೆ ಬೇಕಾದಷ್ಟು ಜಾಗವನ್ನು ಕೊಟ್ಟಿದ್ದೇವೆ. ಹಾಗೆಯೇ ತೊಗಲಿನ ಕೆಲಸ ಮಾಡುವವರಿಗೆ ವಿಶೇಷ ಆದ್ಯತೆಯನ್ನು ಕೊಡಬೇಕೆಂದು ನಾನೂ ನಗರಾಭಿವೃದ್ಧಿ ಸಚಿವರು ಮಾತನಾಡಿ ಅದಕ್ಕೆ ಈಗಾಗಲೇ ಸಂಬಂಧಪಟ್ಟವರಿಗೆ ಆದೇಶಗಳನ್ನು ಕೊಟ್ಟಿದ್ದೇವೆ. ಆ ಭಾಗದ ಬಡವರಿಗೆ ಏನೂ ತೊಂದರೆಯಾಗದ ಹಾಗೆ ಕ್ರಮ ತೆಗೆದುಕೊಂಡಿದ್ದೇವೆ. ಪುನರ್ವಸತಿ ವಿಚಾರದಲ್ಲಿ ರಸ್ತೆ, ಲೈಟನ್ನು ಮಾಡಬೇಕೆಂದು ಮಾನ್ಯ ಶಿವಾನಂದ ಪಾಟೀಲರು ಹೇಳಿದ್ದಾರೆ. ತಾವು ಹೇಳುವ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಶಿವಾನಂದ ಪಾಟೀಲ್ : ಕೆ.ಇ.ಬಿ. ಲೈನ್ಸ್ ಸಬ್‌ಮರ್ಜ್ ಆಗುತ್ತಿದೆ. ಇದು ಮುಖ್ಯವಾದುದು.

ಶ್ರೀ ಜೆ.ಡಿ. ಪಾಟೀಲ್ : ತಾವು ಕಟ್ಟಡಗಳಿಗೇನು ಮೌಲ್ಯಮಾಪನ ಮಾಡಿ ಅವಾರ್ಡ್ ಮಾಡಿದ್ದರೋ ಅದನ್ನು ಮರು ಮೌಲ್ಯಮಾಪನ ಮಾಡಿದೆ, ಇದಕ್ಕೆ ಯಾವ ಕಾರಣವನ್ನೂ ಹೇಳಿಲ್ಲ. ಐದಾರು ಗ್ರಾಮಗಳಲ್ಲಿ ಕಟ್ಟಡಗಳ ಬೆಲೆಯನ್ನು ಕಡಿಮೆ ಮಾಡಿದ್ದಾರೆ. ನಾವು ಅಧಿಕಾರಿಗಳೊಂದಿಗೆ ಸಭೆ ಮಾಡಿ ಮನೆಗಳಿಗೆ ಇನ್ನೂ ಹೆಚ್ಚು ಬೆಲೆಯನ್ನು ನಿಗದಿ ಮಾಡಬೇಕಾಗಿತ್ತು ಎಂದು ಹೇಳಿದ್ದರು ಸಹ ಆ ಐದು ಗ್ರಾಮಗಳಲ್ಲಿ ಇನ್ನೂ ಹೆಚ್ಚು ಬೆಲೆ ಕೊಡಬೇಕಾಗಿದ್ದ ಪರಿಸ್ಥಿತಿ ಇದ್ದರೂ ಅನ್ಯಾಯ ಮಾಡಿ ಕಟ್ಟಡಗಳಿಗೆ ಮರು ಮೌಲ್ಯಮಾಪನದಲ್ಲಿ ಕಡಿಮೆ ಮಾಡಿದ್ದಾರೆ. ಅಧಿಕಾರಿಗಳ ಕುಮ್ಮಕ್ಕಿನಿಂದ ಮಾಡಿರುವ ಕೆಲಸ ಇದಾಗಿದೆ. ದಯಮಾಡಿ ಇದನ್ನು ಸರಿಪಡಿಸಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ತಾವೇನು ಹೇಳಿದ್ದೀರಿ ಅದನ್ನು ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಿದರು. ಕೆಲವು ಅಧಿಕಾರಿಗಳು ಮತ್ತೆ ಸರ್ವೆ ಮಾಡುತ್ತಿದ್ದಾರೆ, ರೈತರಿಗೆ ಕಿರುಕುಳ ಕೊಡುತ್ತಿದ್ದಾರೆಂದು ನನ್ನ ಗಮನಕ್ಕೆ ತಾವು ತಂದಿದ್ದೀರಿ. ಯಾವ ಅಧಿಕಾರಿ ಆ ರೀತಿ ಕಿರುಕುಳವನ್ನು ಕೊಡುತ್ತಿದ್ದರೋ ಅಂಥವರಿಗೆ ಎಚ್ಚರಿಕೆಯನ್ನು ಕೊಟ್ಟು ಆ ರೀತಿ ಕಿರುಕುಳವಾಗದ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ, ಮಾನ್ಯ ವಿರೋಧ ಪಕ್ಷದ ನಾಯಕರು ಅವಿಭಕ್ತ ಕುಟುಂಬವಿದ್ದವರಿಗೆ ಒಂದೇ ಶೆಡ್‌ನ್ನು ಕೊಟ್ಟರೆ ಆಗುವುದಿಲ್ಲವೆಂದು ಹೇಳಿದ್ದಾರೆ. ಅದನ್ನು ನಾನೂ ಸಹ ಒಪ್ಪುತ್ತೇನೆ. ಏಕೆಂದರೆ ಇರತಕ್ಕ ಶೆಡ್ಡಿನ ವಿಸ್ತೀರ್ಣವೂ ಕಡಿಮೆ ಇದೆ, ಇಲ್ಲಿ ಎರಡು ಮೂರು ಕುಟುಂಬಗಳು ವಾಸ ಮಾಡಲು ಸಾಧ್ಯವಿಲ್ಲ. ಎರಡು ಮೂರು ಕುಟುಂಬಗಳು ಇದ್ದಂಥ ಸಂದರ್ಭದಲ್ಲಿ ಪರಿಸ್ಥಿತಿಯನ್ನು ನೋಡಿಕೊಂಡು ಎರಡು, ಮೂರು ಷೆಡ್‌ಗಳನ್ನು ಕೊಡಲು ಸೂಕ್ತ ಆದೇಶವನ್ನು ಕೊಡುತ್ತೇನೆ. ಹಿನ್ನೀರಿನಿಂದ ಕೆಲವು ಹಳ್ಳಿಗಳಿಗೆ ರಸ್ತೆ ಸಂಪರ್ಕ ನಿಂತುಹೋಗಿದೆಯೆಂದು ಹೇಳಿದ್ದೀರಿ. ಅಲ್ಲಿ ರಸ್ತೆ ಮಾಡಲು ಏನು ಕ್ರಮವನ್ನು ಹಾಕಿಕೊಳ್ಳಬೇಕೋ ಅದನ್ನು ಮಾಡುತ್ತೇವೆ. ನಾವು ಈಗಾಗಲೇ ಪ್ಲಾನ್ಡ್ ಪ್ರೋಗ್ರಾಮ್ನು ಆಂಟಿಸಿಪೇಟ್ ಸಹ ಮಾಡಿದ್ದೇವೆ. ಆ ಕೆಲಸ ಪ್ರಾರಂಭವಾಗಿರಬೇಕು ಎಲ್ಲಾದರು ಪ್ರಾರಂಭವಾಗಿಲ್ಲದಿದ್ದರೆ ತಾವು ನನಗೆ ತಿಳಿಸಿ, ಆ ವಿಚಾರದಲ್ಲಿ ಗಮನಹರಿಸುವಂತೆ ಸಂಬಂಧಪಟ್ಟ ಅಯುಕ್ತರಿಗೆ ತಿಳಿಸುತ್ತೇನೆ. ಮಾನ್ಯ ಶಿವಾನಂದ ಪಾಟೀಲರು ಹೇಳಿದಂತೆ ಎಲ್ಲಿ ಕೆ.ಇ.ಬಿ. ಲೈನ್‌ಗಳೇ ಮುಳುಗಿಹೋಗಿರುತ್ತದೋ ಆಗ ವಿದ್ಯುತ್ ಸಂಪರ್ಕವೇ ನಿಂತುಹೋಗುತ್ತದೆ. ಅದು ಆಗಬಾರದು ಎಂಬ ದೃಷ್ಟಿಯಿಂದ ಒಂದು ವೇಳೆ ಎಲ್ಲಾದರೆ ಆಗುತ್ತಿದ್ದರೆ ಯುದ್ಧೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಇಂಧನ ಸಚಿವರು ಒಂದು ಸಭೆಯನ್ನು ಈಗಾಗಲೇ ಮಾಡಿದ್ದಾರೆ. ಇದರ ಬಗ್ಗೆ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ಈ ಎಲ್ಲಾ ವಿಷಯಗಳಿಂದ ಸರ್ಕಾರ.....

2.40 ಪಿ.ಎಂ

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಶೇಕಡ ಐದರಷ್ಟು ಮೀಸಲಾತಿ ಇಡುವುದಾಗಿ ತಿಳಿಸಿದ್ದಾರೆ. ಅದರಿಂದ ಏನೂ ಉಪಯೋಗವಾಗುವುದಿಲ್ಲ. ಹಿಂದಿನ ಸರ್ಕಾರದ ಚಿಂತನೆಯಂತೆ ಎಲ್ಲಾ ನೌಕರಿಗಳು ಅವರಿಗೆ ಸಿಗುವಂತೆ ಮಾಡಬೇಕು. ಈಗಾಗಲೇ ಕೆಲವೊಂದು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಂತ್ರಸ್ತರ ಮಕ್ಕಳು ಕಳೆದ 10 ವರ್ಷಗಳಿಂದ ಉದ್ಯೋಗದಲ್ಲಿದ್ದಾರೆ. ಆರ್ಥಿಕ ಮಿತವ್ಯಯದ ಕಾರಣ ಅನುದಾನ ನಿಲ್ಲಿಸಿದ್ದಾರೆ. ಅದನ್ನು ತಕ್ಷಣ ಬಿಡುಗಡೆ ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೇ, ಸರ್ಕಾರಿ ನೇಮಕಾತಿಗಳಲ್ಲಿ ಸಂತ್ರಸ್ತರ ಮಕ್ಕಳಿಗೆ ಮೀಸಲಾತಿ ಇಡುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅಲ್ಲಿ ಜಮೀನು ಹಂಚಿರುವುದರ ಬಗ್ಗೆ ಸಾಕಷ್ಟು ಕಂಪ್ಲೇಂಟ್ಸ್ ಇವೆ. ಚರ್ಚೆಗೆ ಅವಕಾಶ ಕೊಟ್ಟರೆ ನಾನು ಎಲ್ಲವನ್ನೂ ಹೇಳುತ್ತೇನೆ. ಜಿಲ್ಲಾ ಉಸ್ತುವಾರಿ ಸಚಿವರು ಸಭೆಯೊಂದನ್ನು ಕರೆಯಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಜಮೀನಿಗೆ ಸಂಬಂಧಪಟ್ಟಂತೆ ಎಲ್ಲಾ ರೀತಿಯ ಕಂಪ್ಲೇಂಟ್‌ಗಳಿಗೂ ಸರ್ಕಾರ ಸ್ಪಂದಿಸುತ್ತದೆಯೇ ಎಂದು ನಾನು ತಿಳಿಸಬಯಸುತ್ತೇನೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೇ, ಹಿನ್ನೀರಿನಿಂದ ಮುಳುಗಡೆಯಾದ ಪ್ರದೇಶದಲ್ಲಿ ಕೈಗೊಂಡಂತಹ ಕ್ರಮಗಳ ಬಗ್ಗೆ ಸವಿಸ್ತಾರವಾಗಿ ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಿದ್ದಾರೆ. ವಿಶೇಷವಾಗಿ ನಾರಾಯಣಪುರ ಜಲಾಶಯದಲ್ಲಿ ಹೆಚ್ಚುವರಿಯಾಗಿ ಮುಳುಗಡೆಯಾದಂತಹ ಜಮೀನನ್ನು ಪುನಃ ಸರ್ವೆ ಮಾಡಬೇಕೆಂದು ಮಾನ್ಯ ಸಚಿವರೇ 2-3 ಬಾರಿ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದ್ದಾರೆ. ಕೆಲವೆಡೆ ಆಗಲೇ ಸರ್ವೆ ಆಗಿದೆ. ಆದರೆ ಇನ್ನೂವರೆಗೆ ಅಲ್ಲಿ ಯಾವ ಕ್ರಮವೂ ಕೂಡ ಮುಂದುವರೆಯುತ್ತಿಲ್ಲ. ಅಧಿಕಾರಿಗಳು ಯಾವುವು ಸರ್ವೆ ಆಗಿದ್ದವೋ ಅವುಗಳನ್ನೇ ಪುನಃ ಸರ್ವೆ ಮಾಡಬೇಕೆಂದು ಬರೆಯುತ್ತಾರೆ. ಮಂತ್ರಿಗಳು ಬರೆದಂತಹ ಪತ್ರಗಳನ್ನು ಅಧಿಕಾರಿಗಳು ಏನೂ ಕ್ರಮ ತೆಗೆದುಕೊಳ್ಳದೇ ಕಳೆದ ಒಂದು ವರ್ಷದಿಂದಲೇ ಹಾಗೆಯೇ ಇಟ್ಟುಕೊಂಡಿದ್ದಾರೆ. ಯಾವ ಅಧಿಕಾರಿಗಳು ಆ ರೀತಿಯಾಗಿ ಮಾನ್ಯ ಸಚಿವರ ಆದೇಶಗಳನ್ನು ಜಾರಿಗೊಳಿಸದೇ ಉಲ್ಲಂಘಿಸುತ್ತಿದ್ದಾರೋ ಅವರ ಮೇಲೆ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ರೈತರಿಗೆ ಪರಿಹಾರ ಕೊಡಿಸುವುದರಲ್ಲಿ ಸರ್ಕಾರ ಇನ್ನು ಹೆಚ್ಚಿನ ವಿಳಂಬ ಮಾಡದೇ ಅದರ ಬಗ್ಗೆ ಹೆಚ್ಚಿನ ಕ್ರಮಕೈಗೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದನ್ನು ನೋಡಿ ನನಗೆ ಸಂತೋಷವಾಯಿತು. ಕಳೆದ ಒಂದು ವರ್ಷದಿಂದ ನನಗೆ 'ಪಾರದರ್ಶಕ ಸರ್ಕಾರ' ಎಂಬ ಪದಕ್ಕೆ ನನಗೆ ಉತ್ತರ ಸಿಕ್ಕಿರಲಿಲ್ಲ. ಇವತ್ತು ಮಾನ್ಯ ಸಚಿವರು ಉತ್ತರ ನೀಡಿರುವ ಧಾಟಿಯನ್ನು ನೋಡಿದಾಗ ಅವರು 'ಪಾರದರ್ಶಕ ಮಂತ್ರಿ' ಎನಿಸಿಕೊಳ್ಳಲು ಅರ್ಹರಾಗಿದ್ದಾರೆ. ಆದರೆ 'ಪಾರದರ್ಶಕ ಸರ್ಕಾರ' ಎಂದು ಹೇಳಲಾಗುವುದಿಲ್ಲ. ಉತ್ತಮವಾಗಿ ಉತ್ತರ ನೀಡಿದ್ದಕ್ಕಾಗಿ ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಿಗೆ ಪ್ರಶಂಸೆ ಮಾಡಲು ಇಚ್ಛಿಪಡುತ್ತೇನೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಸರ್ಕಾರ ಪಾರದರ್ಶಕವಾಗಿರುವುದರಿಂದಲೇ ಮಂತ್ರಿಗಳು ಹಾಗೂ ಇತರ ಎಲ್ಲರೂ ಸಹಾ ಪಾರದರ್ಶಕರಾಗಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಎಸ್.ಎಸ್. ಪಾಟೀಲರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಂತ್ರಸ್ತರ ಮಕ್ಕಳು ಉದ್ಯೋಗದಲ್ಲಿದ್ದರೆ ಆ ಸಂಸ್ಥೆಗಳಿಗೆ ಬೇಗ ಅನುದಾನ ಕೊಡಿಸಬೇಕೆಂದು ಮಾನ್ಯ ಸದಸ್ಯರು ಕೋರಿದರು. ಅಂತಹ ಪ್ರಕರಣಗಳು ಐದಾರು ಇರಬಹುದು. ಅವುಗಳನ್ನು ನಮ್ಮ ಗಮನಕ್ಕೆ ತಂದರೆ ಅದನ್ನೂ ಸಹಾ ಬೇಗ ಆಗುವಂತೆ ನಾವು ಮಾಡೋಣ. ಸರ್ಕಾರದಲ್ಲಿ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇದ್ದವೋ ಅಲ್ಲಿನ ಎಲ್ಲಾ ಹುದ್ದೆಗಳನ್ನೂ ಸಂತ್ರಸ್ತರ ಮಕ್ಕಳಿಗೇ ಕೊಡಬೇಕೆಂಬ ಚಿಂತನೆ ಇತ್ತು ಎಂದು ಮಾನ್ಯ ಸದಸ್ಯರು ಹೇಳಿದರು. ಆ ಚಿಂತನೆ ಎಲ್ಲಿತ್ತೋ ಏನೋ ನನಗೆ ಗೊತ್ತಿಲ್ಲ. ಈ ಚಿಂತನೆ ಬಗ್ಗೆ ಏನೊಂದು ಕಾಗದಗಳಿದ್ದವೋ, ಆ ಕಾಗದಗಳಿದ್ದ ಕಡತಗಳನ್ನೆಲ್ಲಾ ಧೂಳು ತಿನ್ನುವಂತೆ ಕಪಾಟಿನಲ್ಲಿಡಲಾಗಿತ್ತು. ಆ ಕಡತವನ್ನು ನಾವು ಕೈಗೆತ್ತಿಕೊಂಡು ಈ ರೀತಿ ಶೇಕಡ ಐದರಷ್ಟು ಮೀಸಲಾತಿ ಇಡುವ ಕೆಲಸ ಮಾಡಿದ್ದೇವೆ ಎಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹುಲಿಗುಡ್ಡ ಯೋಜನೆಯನ್ನು ಎರಡು ವರ್ಷಗಳಲ್ಲಿ ಪೂರ್ತಿ

ಮಾಡುತ್ತೀರಾ ? ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ಸವಿಸ್ತಾರವಾಗಿರತಕ್ಕಂಥ ಉತ್ತರವನ್ನು ನಾನು ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಮತ್ತು ನಾನು ಶುಕ್ರವಾರ ರಾತ್ರಿ ಊರಿಗೆ ಹೋಗುವಾಗ ವಿವರವಾಗಿ ನಾನು ಎಲ್ಲಾ ವಿಚಾರಗಳನ್ನೂ ಅವರಿಗೆ ತಿಳಿಸುತ್ತೇನೆ. ಮಾನ್ಯ ಪೂಜಾರ್‌ರವರು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸಭೆಯೊಂದನ್ನು ಕರೆಯಬೇಕೆಂದು ಕೋರಿದರು. ಮಾನ್ಯ ಸದಸ್ಯರಿಗೆ ತಿಳಿದಂತೆ ನಾನು ಅಲ್ಲಿ ಐದು ಮೀಟಿಂಗ್‌ಗಳನ್ನು ಮಾಡಿದ್ದೇನೆ ಸನ್ಮಾನ್ಯ ಮುಖ್ಯಮಂತ್ರಿಗಳು ಆಲಮಟ್ಟಿಯಲ್ಲಿ ಮೀಟಿಂಗ್ ಒಂದನ್ನು ಮಾಡಿದ್ದಾರೆ. ಅವರು ಮತ್ತೆ ಬೆಂಗಳೂರಿನಲ್ಲಿ ಮೀಟಿಂಗ್ ಮಾಡಿದಾಗ ಮೀಸಲಾತಿ ಬಗ್ಗೆ ಒಂದು ನಿರ್ಣಯಕ್ಕೆ ಬಂದರು. ಇಷ್ಟಾಗಿಯೂ ಕೂಡ ಮಾನ್ಯ ಸದಸ್ಯರಿಗೆ ಇನ್ನೊಂದು ಸಭೆ ಕರೆಯಬೇಕು ಎಂದು ಬಯಸುವುದಾದರೆ, ಈ ಅಧಿವೇಶನ ಮುಗಿದ ಒಂದು ವಾರ ಅಥವಾ 15 ದಿವಸಗಳೊಳಗಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮೀಟಿಂಗ್ ಮಾಡಲು ಒಂದು ದಿನಾಂಕ ನಿಗದಿಪಡಿಸುತ್ತೇನೆ. ಬಾಗಲಕೋಟೆ ಜಿಲ್ಲೆಯವರು ಯಾರ್ಯಾರು ಬರುತ್ತೀರೋ ಅವರು ಅಂದು ಅವರೊಡನೆ ಆ ಬಗ್ಗೆ ಚರ್ಚೆ ಮಾಡಬಹುದು. ಸನ್ಮಾನ್ಯ ನಾಡಗೌಡರು ನಾನು ಕೊಟ್ಟಿರತಕ್ಕ ಆದೇಶದ ಅನುಷ್ಠಾನ ಆಗಿಲ್ಲ ಎಂಬ ಮಾತನ್ನು ಪ್ರಸ್ತಾಪ ಮಾಡಿದರು. ಯಾವ ಅಧಿಕಾರಿ ರೈತರ ಸಮಸ್ಯೆಗಳಿಗೆ ಸ್ಪಂದಿಸದೇ ಸರ್ಕಾರದ ಆದೇಶಕ್ಕೂ ಕೂಡ ಸ್ಪಂದಿಸಿರುವುದಿಲ್ಲವೋ ಅಂತಹವರ ಮೇಲೆ ಸೂಕ್ತವಾಗಿರತಕ್ಕಂಥ ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮ ಯಾವ ಆದೇಶ ಪಾಲನೆ ಆಗಿಲ್ಲ ಎಂಬುದನ್ನು ಮಾನ್ಯ ಮುಖ್ಯ ಸಚೇತಕರು ನನ್ನ ಗಮನಕ್ಕೆ ತಂದರೆ ಅದರಿಂದ ಹೆಚ್ಚಿನ ಅನುಕೂಲವಾಗುತ್ತದೆ ಎಂಬ ಮಾತನ್ನು ಹೇಳಿ ಮಾನ್ಯ ಸದಸ್ಯರುಗಳಿಗೆಲ್ಲಾ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ನಿಯಮ 69ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ರೈತರು ಬೆಳೆದಿರುವ ಮೆಕ್ಕೆಜೋಳ, ಭತ್ತ, ಅಲೂಗಡ್ಡೆ, ಎಣ್ಣೆಕಾಳುಗಳು, ತೊಗರಿ, ತೆಂಗಿನ ಬೆಲೆಗಳು ಕುಸಿದಿರುವ ಕುರಿತು.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಕರಡಿ ಸಂಗಣ್ಣನವರು ಮಾನ್ಯ ಅಮರೇಗೌಡ ಬಯ್ಯಾಪುರ್‌ರವರು ಮತ್ತು ಇತರರು ರಾಯಚೂರು ಜಿಲ್ಲೆಯಿಂದ ಬಂದಿರತಕ್ಕ ಶಾಸಕರುಗಳಾಗಿದ್ದಾರೆ. ಹಾವೇರಿ ಜಿಲ್ಲೆಯಿಂದ ಸಹಾ ಶಾಸಕರಾಗಿ ಬಂದಿರುವವರು ಇಲ್ಲಿದ್ದಾರೆ. ಅಲ್ಲಿ ಮೆಕ್ಕೆಜೋಳವನ್ನು ಖರೀದಿ ಮಾಡುತ್ತಿಲ್ಲ. ಮಾನ್ಯ ಮಾರುಕಟ್ಟೆ ಸಚಿವರು ಮೊನ್ನೆ ಒಂದು ಹೇಳಿಕೆಯನ್ನು ನೀಡಿ ಸರ್ಕಾರ ಮೆಕ್ಕೆಜೋಳ ಕೊಳ್ಳಲಿಕ್ಕೆ ಸುಮಾರು 16 ಸೆಂಟರ್‌ಗಳನ್ನು ಓಪನ್ ಮಾಡಿದ್ದೇವೆ ಎಂದು ಹೇಳಿದರು. ಅದೇ ರೀತಿ ಮಾನ್ಯ ಸಚಿವರು ಭತ್ತವನ್ನು ಕೊಳ್ಳಲಿಕ್ಕೂ ಸರ್ಕಾರದವರು ಸೆಂಟರ್‌ಗಳನ್ನು ಓಪನ್ ಮಾಡಿದ್ದೇವೆ ಎಂದು ಅವರು ಹೇಳಿದರು. ಆದರೆ ವಸ್ತುಸ್ಥಿತಿಯಲ್ಲಿ ಅದು ಆಗಿಲ್ಲ. ನಾಳೆ ಮತ್ತು ನಾಡಿದ್ದು ಸಾರ್ವತ್ರಿಕ ರಜಾ ಇರುವುದರಿಂದ ಮತ್ತೆ ನಾವು ಸೋಮವಾರವೇ ಸೇರುತ್ತಿದ್ದೇವೆ. ಆ ಭಾಗದ ರೈತರು ನಿಜವಾಗಿಯೂ ಸಹಾ ಅಲ್ಲಿ ಬಹಳ ಕಂಗಾಲಾಗಿದ್ದಾರೆ. ಮಾನ್ಯ ಸಚಿವರು ಏನು ಹೇಳಿಕೆಯನ್ನು ಈ ಸದನಕ್ಕೆ ಕೊಟ್ಟಿದ್ದಾರೋ ಅದರ ಪ್ರಕಾರ ಮೆಕ್ಕೆ ಜೋಳವನ್ನು ತಕ್ಷಣ ಕೊಪ್ಪಳದಲ್ಲಿ ಕೊಳ್ಳಲಿಕ್ಕೆ ಮತ್ತು